Estd. 1981

# Karnataka Association for the Advancement of Science (R.)

**Reg. No.** 1961 (No.122/81-82/13-7-1981)

## ನಿಯತಕಾಲಿಕ ಪತ್ರಿಕೆ

ಸಂಪುಟ: 1 ಸಂಚಿಕೆ: 1



KAAS
Clock Tower Building,
Central College Campus
Bangalore-560 001

**Website:**
**kaasorg.com**

**Newsletter**
**Bimonthly**

**Aug-Sep 2024**

Vol 1 Issue 1

**Editorial Board**

**Editor**
Muktha B Kagali

**Members**
Dr. G. Nagendrappa
Dr. Basavaraj A. Kagali
Dr. R. Shankar
Dr. P. Nagaraju
Dr. R. Nagendra
Dr. G.N. Dayananda
Dr. K.K. Mahesh

**Contributors are invited to submit their articles in Word format to our email address: kaasnewsletter@gmail.com**

# Science as the Power Behind Social Transformation

## Contents


| | | | |
|---|---|---|---|
| **1.** | **President's Note** | …. Prof. K. Siddappa | 2 |
| **2.** | **Editor's Note** | …. Muktha B. Kagali | 3 |
| **3.** | **ಶತಾಯುಷಿ ಸಂಖ್ಯಾಶಾಸ್ತ್ರಜ್ಞ, ಸಿ.ಆರ್. ರಾವ್** | …. ಡಾ. ಕರಿಂಬಿ ಕೆ. ಮಹೇಶ್, ಡಾ. ಜಿ.ಎನ್. ದಯಾನಂದ | 4 |
| **4.** | **ಆಂತ್ವಾಞ ಲಾರೆನ್ ಲವಾಸಿಯೆ** | …. Dr. G. Nagendrappa | 8 |
| **5.** | **Discovering Exoplanets** | …. Dr. Basavaraj A .Kagali | 15 |
| **6.** | **ಮೊಬೈಲ್ ಫೋನ್‌ಗಳಲ್ಲಿ ಅಗತ್ಯವಾದ ಖನಿಜಗಳು** | …. ಪ್ರೊ. ಆರ್. ನಾಗೇಂದ್ರ | 21 |
| **7.** | **ಪ್ಲುಟೋ–ಚರೋನ್ ರೋಚಕ ನೃತ್ಯ** | …. ಡಾ. ಜಿ.ಎನ್. ದಯಾನಂದ | 24 |
| **8.** | **Geology for Sustainable Urban Living** | ... Dr. K.N. Radhika | 29 |
| **9.** | **Regulations necessary before empowering the AI** | …. ಡಾ. ಕರಿಂಬಿ ಕೆ. ಮಹೇಶ್, ಡಾ. ಕವಿತಾ ಕೆ. ಮಹೇಶ್ | 31 |
| **10.** | **ಕಣಾದ ಜರ್ನಲ್ ಪ್ರಸಾರವನ್ನು ಕಾಪಾಡಿದ ನಿರ್ಣಾಯಕ ಟೆಲಿಗ್ರಾಮ್ ಅದಾಗಿತ್ತಾ?** | …. ಡಾ. ಜಿ.ಎನ್. ದಯಾನಂದ, ಶ್ರೀ ಎಚ್.ವಿ. ರಾಮಚಂದ್ರ | 33 |
| **11.** | **How important is Earth (and Earth Science) to society?** | …. Dr. R. Shankar | 34 |
| **12.** | **KAAS Fellowship Award: A Tribute to Excellence** | | 39 |
| **13.** | **KAAS President Felicitation: Celebrating a Visionary Leader** | | 40 |
| **14.** | **KAAS Members: Participation in Notable Events** | | 41 |
| **15.** | **KAAS Activities** | | 42 |
| **16.** | **Guidelines for authors** | | 44 |

# President's Note



**Prof. K. Siddappa**

"It is science alone that can solve the problems of hunger and poverty, of insanitation and illiteracy, of superstition and dreadening customs and traditions, of resources running to waste... The future belongs to science and those who make friends with science," said the first Prime Minister of our country and a great visionary, Jawaharlal Nehru. He encouraged the growth of modern science and technology. Homi Bhabha and Vikram Sarabhai founded a strong atomic energy program and space research program, while M.S. Swaminathan's efforts ushered in the Green Revolution in the country. These advancements, along with the associated growth of new and relevant science and technology, have paved the way for the all-around development of the country, and today, India is at the threshold of becoming a superpower.

In tune with these developments, I am proud to say that the Karnataka Association for the Advancement of Science (KAAS), Bengaluru, has been conducting research and development activities on ecology and environmental conservation of biodiversity since its inception in 1981, making significant contributions to development. Successful efforts have also been made to promote research in colleges and universities by organizing seminars, workshops, brainstorming sessions involving scientists and industries, among other activities. KAAS has also instituted "Young Scientist Awards" and "Honorary Fellowship Awards" to senior scientists to encourage good research.

As an important activity, KAAS started publishing a digital science communication newsletter in January 2015. The newsletter had a break due to some issues. The Executive Committee has since resolved these issues, and the KAAS newsletter, in a new form bearing the name "Vaisheshika," is reaching you, carrying news about activities and programs of KAAS conducted during the last one-year missing period and some exciting articles on science and scientists. It is the fond hope of KAAS that Vaisheshika will teach science to students and teachers of schools, colleges, and universities and inspire them to learn, teach, and conduct research in an exemplary way, contributing to the development of society, akin to the world's first science school, the Vaisheshika School of Philosophy of our uniquely proud ancient civilization.

Finally, I would like to take this opportunity to remember with great gratitude the founders of KAAS and thank them for their vision and dedicated service. In particular, on behalf of all the members of KAAS, I would like to express sincere thanks to Prof. N.G. Puttaswamy and Prof. M.N. Anandram for the invaluable service rendered in bringing out the KAAS newsletter from 2015 to 2023. In the same breath, I would like to express my sincere appreciation and thanks to the new editor, Mrs Mukta B. Kagali, and her committed team—all the members of the Editorial Board—and wish them the very best in their endeavor.

******

# Editor’s Note



**Muktha B Kagali**

Dear Readers,

With great pleasure and a deep sense of responsibility, I welcome you to the inaugural issue of Vaisheshika, our newsletter from the Karnataka Association for the Advancement of Science. This newsletter aims to bridge the gap between scientific knowledge and its practical application, fostering a community where teachers, students, and the general public can come together to share, learn, and grow.

Our association has always been dedicated to promoting science and its benefits to society. This newsletter is an extension of that mission. Each issue will feature a range of articles that cover cutting-edge scientific research, innovative teaching methods, and practical applications of science in everyday life. We believe that by making scientific knowledge accessible and engaging, we can inspire a new generation of thinkers, problem-solvers, and innovators.

In this first issue, we've curated a diverse selection of articles that reflect the wide-ranging interests and expertise of our contributors. You'll find discussions on topics as varied as the discovery of exoplanets, sustainable urban living through geology, and the ethical regulations necessary for empowering AI. We also celebrate excellence with our KAAS Fellowship Award and honor visionary leadership with a tribute to our President. Additionally, you'll find fascinating stories about essential minerals in mobile phones, the Pluto-Charon adventure, and the critical telegram that saved the circulation of the Kanaada Journal. We are also excited to include an insightful piece on "How Important is Earth (and Earth Science) to Society?"

As we embark on this exciting new venture, I would like to extend heartfelt thanks to all our contributors whose articles have added immense value to this inaugural issue. Your expertise and enthusiasm are the lifeblood of this newsletter, and we are grateful for your willingness to share your knowledge with our readers.

A special note of appreciation is also due to our esteemed President, whose vision and leadership have been instrumental in bringing Vaisheshika to life. Under his guidance, we have been able to launch this newsletter as a meaningful platform for scientific dialogue and community engagement.

I would also like to express my deep gratitude to the editorial board for their invaluable suggestions and support in making this newsletter more valuable. Their insights and dedication have been crucial in shaping the content and direction of this publication.

We invite you to join us as we embark on this new journey. Your feedback, suggestions, and contributions are invaluable as we strive to make this newsletter a vibrant and relevant resource for all. Let us cultivate a culture of curiosity, critical thinking, and lifelong learning together.

Thank you for your support, and I hope you enjoy reading this first issue as much as we have enjoyed putting it together.

Warm Regards

# ಶತಾಯುಷಿ ಪ್ರೊಫೆಸರ್ ಸಿ.ಆರ್. ರಾವ್

ಶ್ರೇಷ್ಠ ಸಂಖ್ಯಾಶಾಸ್ತ್ರಜ್ಞರಾಗಿದ್ದ ಶತಾಯುಷಿ ಪ್ರೊಫೆಸರ್ ಸಿ.ಆರ್. ರಾವ್ ಅವರಿಗೆ ಸಂಖ್ಯಾಶಾಸ್ತ್ರದ ನೊಬೆಲ್ ಪಾರಿತೋಷಕವೆಂದೇ ಪ್ರಖ್ಯಾತಿ ಪಡೆದಿರುವ 'ಸಂಖ್ಯಾಶಾಸ್ತ್ರ ಅಂತರಾಷ್ಟ್ರೀಯ ಪ್ರಶಸ್ತಿ'ಯು 2023ರ ಸಾಲಿನಲ್ಲಿ ದೊರಕಿದ ಸಂದರ್ಭ ಇನ್ನೊಮ್ಮೆ ಸುದ್ದಿಯಲ್ಲಿದ್ದರು.





**ಡಾ. ಕರಿಂಬಿ ಕೆ. ಮಹೇಶ್**
ಭೌತಶಾಸ್ತ್ರ ವಿಭಾಗ, ನಾಗಾರ್ಜುನ ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿ

**ಡಾ. ಜಿ. ಎನ್. ದಯಾನಂದ**
ಉನ್ನತ ವಿಜ್ಞಾನಿ (ನಿವೃತ್ತ), ಕೌನ್ಸಿಲ್ ಆಫ್ ಸೈಂಟಿಫಿಕ್ & ಇಂಡಸ್ಟ್ರಿಯಲ್



20ನೇ ಶತಮಾನದ ಸುಮಾರು ಮಧ್ಯ ಭಾಗದಲ್ಲಿ ಸಂಖ್ಯಾಶಾಸ್ತ್ರ ಕೇವಲ ಮಾಹಿತಿ ಸಂಗ್ರಹ, ವಿಂಗಡನೆ, ಸರಾಸರಿ ಲೆಕ್ಕಾಚಾರ ಮತ್ತು ಮಾಹಿತಿಗಳ ನಡುವಿನ ಸಂಬಂಧಗಳ ಬಗ್ಗೆ ಅಧ್ಯಯನ ನಡೆಸುವ ಒಂದು ವಿಧಾನ ಶಾಸ್ತ್ರವಾಗಿತ್ತು. ಅಂದು ಸಿ.ಆರ್. ರಾವ್‌ರವರು ಶೈವಾವಸ್ಥೆಯಲ್ಲಿದ್ದ ಸಂಖ್ಯಾಶಾಸ್ತ್ರಕ್ಕೆ ವಿವಿಧ ಗಣಿತ ಮಾದರಿಗಳನ್ನು ಪರಿಚಯಿಸಿದ ಮೊದಲಿಗರಲ್ಲಿ ಒಬ್ಬರು. ಸಂಖ್ಯಾಶಾಸ್ತ್ರದಲ್ಲಿ ಗಣಿತಶಾಸ್ತ್ರವನ್ನು ಸೂಕ್ತವಾಗಿ ಬಳಸಿ ಉತ್ತಮ ಮುನ್ಸೂಚಕ ಅಂದಾಜನ್ನು ಹೇಗೆ ಸಿದ್ಧಪಡಿಸಬಹುದು ಎಂಬ ವಿಷಯದಲ್ಲಿ ಅನೇಕ ಉಪಯುಕ್ತ ಕೊಡುಗೆಗಳನ್ನು ಕೊಟ್ಟಿರುತ್ತಾರೆ.

> ಜಗತ್ತು ಕಂಡ ಶ್ರೇಷ್ಠ ಸಂಖ್ಯಾಶಾಸ್ತ್ರಜ್ಞ, ಸಿ. ಆರ್. ರಾವ್ ಪ್ರಮುಖ ಪಾತ್ರವಹಿಸಿ ಅಭಿವೃದ್ಧಿ ಪಡಿಸಿದ ಹಲವಾರು ಮೂಲಭೂತ ಫಲಿತಾಂಶಗಳು ಆಧುನಿಕ ಸಂಖ್ಯಾಶಾಸ್ತ್ರದ ಪ್ರಬಲ ಸಾಧನಗಳಾಗಿದ್ದು ವೈಜ್ಞಾನಿಕ ಸಂಶೋಧನೆಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.

ಕಾಲ್ಯಂಪುಡಿ ರಾಧಾಕೃಷ್ಣ ರಾವ್ (ಸಿ.ಆರ್. ರಾವ್) 1920ನೇ ಸೆಪ್ಟೆಂಬರ್ 10ರಂದು ಕರ್ನಾಟಕದ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ಎಂಬಲ್ಲಿ ಜನಿಸಿದರು. ತಮ್ಮ ತಂದೆ–ತಾಯಿಯರ ಹತ್ತು ಜನ ಮಕ್ಕಳ ಪೈಕಿ ಅವರು ಎಂಟನೇಯವರು. ಚಿಕ್ಕಂದಿನಿಂದಲೂ ಅವರಿಗೆ ಗಣಿತದಲ್ಲಿ ಬಹಳ ಆಸಕ್ತಿ. ತಮ್ಮ 20ನೇ ವಯಸ್ಸಿನಲ್ಲೇ ಗಣಿತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದರು.

ಸಂಶೋಧನೆಯಲ್ಲಿ ಆಸಕ್ತಿ ಹೊಂದಿದ್ದ ಅವರಿಗೆ ಕಲ್ಕತ್ತಾದಲ್ಲಿ ಐ.ಎಸ್.ಐ.ಯ (Indian Statistical Institute) ಸ್ಥಾಪಕರಾದ ಪ್ರೊ. ಪ್ರಸಾಂತ ಚಂದ್ರ ಮಹಾಲನೋಬಿಸ್ ಅವರ ಪರಿಚಯವಾಯಿತು. ಅಲ್ಲಿನ ಪ್ರೆಸಿಡೆಂಸಿ ಕಾಲೇಜಿನಲ್ಲಿ ಪ್ರಗತಿಯಲ್ಲಿದ್ದ ಕೆಲವು ಸಂಶೋಧನೆಗಳ ಬಗ್ಗೆ ಅರಿತಾಗ ಸಿ.ಆರ್. ರಾವ್ ಅವರಿಗೆ ಸಂಖ್ಯಾಶಾಸ್ತ್ರದ ಬಗ್ಗೆ ಆಸಕ್ತಿ ಕೆರಳಿತು. ಆಂಗ್ಲೋ–ಇಂಡಿಯನ್ನರ ಮಾನವಶಾಸ್ತ್ರ ಮಾನದಂಡಗಳ ಮಾಪನ, ಸೆಣಬು ಉತ್ಪಾದನೆಯ ಅಂದಾಜು ಮತ್ತು ಸುಧಾರಣೆ, ಉತ್ತರ ಬಂಗಾಳ ಮತ್ತು ಒರಿಸ್ಸಾದಲ್ಲಿನ ನೆರೆ ಹತೋಟಿ ಮುಂತಾದವು ಅಲ್ಲಿನ ಸಂಶೋಧನಾ ವಿಷಯಗಳಾಗಿದ್ದವು. ಇದರಿಂದ ಪ್ರಭಾವಗೊಂಡು 1941ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರದ ಎಂ.ಎ. ಪದವಿಗೆ ಸೇರಿಕೊಂಡರು. ಅಲ್ಲಿ ಹೊಸದಾಗಿ ಪ್ರಾರಂಭಿಸಿದ ಪಠ್ಯಕ್ರಮವಾದುದರಿಂದ ಅಭ್ಯಸಿಸಲು ಅವಶ್ಯವಿರುವ ಪುಸ್ತಕಗಳಿರಲಿಲ್ಲ. ಪ್ರಾಧ್ಯಾಪಕರುಗಳು ಹೆಚ್ಚಿನ ವಿಷಯಗಳಿಗೆ ಸಂಶೋಧನಾ ಲೇಖನಗಳನ್ನೇ ಮೂಲವಾಗಿರಿಸಿ ತರಗತಿಗಳಲ್ಲಿ ಪಾಠ ಪ್ರವಚನ ಮಾಡುತ್ತಿದ್ದರು. ಇದು ಯುವಕ ರಾಧಾಕೃಷ್ಣ

ರಾಯರ ಸಾಂಪ್ರದಾಯಿಕ ವಿದ್ಯಾಭ್ಯಾಸದ ರೀತಿಯನ್ನು ಬದಲಿಸಿತು. ಸಂಖ್ಯಾಶಾಸ್ತ್ರವನ್ನು ಓರ್ವ ವಿದ್ಯಾರ್ಥಿಗಿಂತ ಮಿಗಿಲಾಗಿ ಸಂಶೋಧಕರಂತೆ ಅಭ್ಯಸಿಸಿದರು. ಎಂ.ಎ. ಪದವಿಯ ಅಂಗವಾದ ಅವರ ಯೋಜನಾ ವರದಿಯು ಶ್ರೇಷ್ಠವಾಗಿ ಹೊಮ್ಮಿತು. ಮೌಲ್ಯಮಾಪನ ಮಾಡಿದ ಪ್ರಾಧ್ಯಾಪಕರುಗಳು ಅದೊಂದು ಪಿ.ಹೆಚ್.ಡಿ. ಮಹಾಪ್ರಬಂಧವನ್ನು ಹೋಲುತ್ತಿದೆಯೆಂದು ಪ್ರಶಂಸಿಸಿದರು. ಆ ಯೋಜನಾ ವರದಿಯ ಅನೇಕ ಅಧ್ಯಯನಗಳು ಮುಂದೆ ಸಂಶೋಧನಾ ಲೇಖನಗಳಾಗಿ ಪ್ರಕಟಗೊಂಡವು.

ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನದ ವೇಳೆ ಪಡೆದ ತರಬೇತಿ ಸಿ.ಆರ್. ರಾಯರನ್ನು ಸಂಖ್ಯಾಶಾಸ್ತ್ರದ ಸಂಶೋಧನೆಯಲ್ಲಿ ಉತ್ತುಂಗಕ್ಕೆ ಏರಿಸಿತು. 1943ರಲ್ಲಿ ಐ.ಎಸ್.ಐ.ನಲ್ಲಿ ತಾಂತ್ರಿಕ ಅಭ್ಯಾಸಿಯಾಗಿ ಸ್ಥಾನ ಪಡೆದುದಲ್ಲದೆ ನಂತರ, ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ನೇಮಕಗೊಂಡರು. ನಲ್ವತ್ತರ ದಶಕ ಮಧ್ಯಭಾಗದಲ್ಲಿ ಸಿ.ಆರ್. ರಾವ್ ತಮ್ಮ ಇತರ ಸಂಶೋಧನಾ ಸಹೋದ್ಯೋಗಿಗಳ ಸಹಭಾಗಿತ್ವದಲ್ಲಿ 'ಕ್ರ್ಯಾಮರ್–ರಾವ್ ಇಕ್ವಾಲಿಟಿ' ಎಂಬ ಫಲಿತಾಂಶವನ್ನು ಪ್ರಕಟಿಸಿದರು. ಸಂಖ್ಯಾಶಾಸ್ತ್ರದ ಈ ವಿಧಾನವು ಇಂದಿಗೂ ಪ್ರಸ್ತುತ ಹಾಗೂ ಅಂದಾಜು ಪ್ರಮಾಣವನ್ನು ಗ್ರಹಿಸುವಲ್ಲಿ ಸಮರ್ಥವೆನಿಸಿದೆ.


ಪ್ರೊ. ಸಿ.ಆರ್. ರಾವ್ ಕುಟುಂಬದೊಂದಿಗೆ ವಿದ್ಯಾರ್ಥಿ ಶ್ರೀನಿವಾಸ ಭೋಗ್ಲೆ ಕುಟುಂಬ

ಪ್ರೊ. ಮಹಾಲನೋಬಿಸ್ ಅವರು ಸಿ.ಆರ್. ರಾಯರನ್ನು 1946ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿದ ಸಂದರ್ಭ ಅವರ ಸಂಶೋಧನಾ ಬಾಳಿಗೆ ಹೆಬ್ಬಾಗಿಲಾಗಿ ಪರಿಣಮಿಸಿತು. ಅಲ್ಲಿ ಪುರಾತತ್ವ ಶಾಸ್ತ್ರ ಮತ್ತು ಜನಾಂಗ ಶಾಸ್ತ್ರದ ವಸ್ತುಸಂಗ್ರಹಾಲಯದಲ್ಲಿ ಸಂಖ್ಯಾಶಾಸ್ತ್ರಜ್ಞರಾಗಿ ಉದ್ಯೋಗಕ್ಕೆ ಸೇರಿಕೊಂಡರು. ನಂತರ ಆಧುನಿಕ ಸಂಖ್ಯಾಶಾಸ್ತ್ರದ ಪಿತಾಮಹರೆನಿಸಿದ ರೊನಾಲ್ಡ್ ಫಿಶರ್ ಅವರ ಮಾರ್ಗದರ್ಶನದಲ್ಲಿ ಕಿಂಗ್ಸ್ ಕಾಲೇಜಿನಲ್ಲಿ ಪಿ.ಹೆಚ್.ಡಿ.ಗೆಂದು ಸಂಶೋಧನೆಯಲ್ಲಿ ತೊಡಗಿಕೊಂಡರು. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಅಂದು ನಡೆಯುತ್ತಿದ್ದ ಅನೇಕ ಬೌದ್ಧಿಕ ಸಮಾವೇಶಗಳು ಮತ್ತು ವಿವಿಧ ಕ್ಷೇತ್ರಗಳ ವಿದ್ವಾಂಸರೊಂದಿಗಿನ ಒಡನಾಟ ಅವರ ಸಂಶೋಧನಾ ತೀಕ್ಷ್ಣತೆಯನ್ನು ಇನ್ನಷ್ಟು ಹೆಚ್ಚಿಸಿತು. ಅಲ್ಲದೆ ಫಿಶರ್ ಅವರ ಪ್ರಯೋಗಾಲಯದಲ್ಲಿ ಇಲಿಗಳ ಅನುವಂಶಿಕತೆಯನ್ನು ಅಂದಿನ ಕಾಲದಲ್ಲಿ ಅಭ್ಯಸಿಸುವ ಅಪರೂಪದ ಅವಕಾಶ ಲಭಿಸಿತು. ಮಲ್ಲೋಕ್ ಯಾಂತ್ರಿಕ ಗಣಕಯಂತ್ರಗಳನ್ನು ಬಳಸಿ ಐಗನ್ ಮೌಲ್ಯ ಮತ್ತು ವೆಕ್ಟರ್‌ಗಳನ್ನು ಪಡೆಯುವ ವಿಧಾನವನ್ನು ಅರಿತರು. ಇದರಿಂದಾಗಿ ಸಂಖ್ಯಾಶಾಸ್ತ್ರದ ಫಲಿತಾಂಶಗಳನ್ನು ಬಹುಶಾಸ್ತ್ರೀಯ ವಿಷಯಗಳಲ್ಲಿ ಅನ್ವಯಿಸಿ ಅನೇಕ ದಿಕ್ಸೂಚಿ ಸಂಶೋಧನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತಾಯಿತು. ಪಿ.ಹೆಚ್.ಡಿ.ಯ ತರುವಾಯ ಸಿ.ಆರ್. ರಾಯರು ಭಾರತಕ್ಕೆ ಹಿಂದಿರುಗಿದರು. ಅನೇಕ ಅವಕಾಶಗಳು ಇದ್ದಾಗ್ಯೂ ಐ.ಎಸ್.ಐ.ಯಲ್ಲಿಯೇ ಪೂರ್ಣ ಪ್ರಾಧ್ಯಾಪಕರಾಗಿ ತಮ್ಮ 29ನೇ ವಯಸ್ಸಿನಲ್ಲಿ ಸೇರಿಕೊಂಡರು. ಮುಂದೆ, ಸ್ವತಂತ್ರ ಭಾರತದಲ್ಲಿ ಪ್ರೊ. ಮಹಾಲನೋಬಿಸ್‌ರವರ ಕನಸಿನ ಕೂಸಾದ ಐ.ಎಸ್.ಐ.ಯನ್ನು ಮುನ್ನಡೆಸುವಲ್ಲಿ ಮಹತ್ತರದ ಪಾತ್ರವಹಿಸಿದರು.

ಐ.ಎಸ್.ಐ.ನಲ್ಲಿ ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಸಂಶೋಧನಾ ಉಪಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸಿ ಮುನ್ನಡೆಸಿದರು. ಅವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ. ಪಡೆದ ಅನೇಕ ಸಂಶೋಧನಾ ವಿದ್ವಾಂಸರುಗಳು ನಂತರ ಬಹಳ ಖ್ಯಾತಿಯನ್ನು ಹೊಂದಿದರು. ಎಸ್.ಆರ್.ಎಸ್. ವರ್ಧಮಾನ್, ದೇಬಾಬ್ರತ ಬಸು, ದೇಸ್ ರಾಜ್, ಜೆ. ರಾಯ್, ಎ. ಮತ್ತಾಯಿ ಮತ್ತು ಶ್ರೀನಿವಾಸ ಭೋಗ್ಲೆ ಅವರಲ್ಲಿ ಕೆಲವರು.

1953–54ರಲ್ಲಿ ಅಮೇರಿಕದ ಇಲ್ಲಿನೋಯಿಸ್ ವಿಶ್ವವಿದ್ಯಾನಿಲಯಕ್ಕೆ ಕೈಗೊಂಡ ತಮ್ಮ ಒಂದು ಅಧ್ಯಯನ ಪ್ರವಾಸದಲ್ಲಿ ಅವರಿಗೆ ಅಲ್ಲಿಯ ಪ್ರಥಮ ಡಿಜಿಟಲ್ ಗಣಕಯಂತ್ರವಾದ ಇಲ್ಲ್ಯಾಕ್‌ನ್ನು ಬಳಸುವ ಅವಕಾಶ ದೊರಕಿತು. ಅದು ಅತ್ಯಂತ ಕ್ಲಿಷ್ಟ ಗಣಿತಗಳನ್ನು ಬಿಡಿಸುವಲ್ಲಿ ಅತೀ ಕಡಿಮೆ ಸಮಯ ಬಳಸುತ್ತಿರುವುದನ್ನು ಮನಗಂಡರು. ಭಾರತಕ್ಕೆ ಹಿಂದಿರುಗಿದ ಬಳಿಕ ಐ.ಎಸ್.ಐ.ನಲ್ಲಿ ಸ್ಟಾಟಿಸ್ಟಿಕಲ್ ಕಂಪ್ಯೂಟಿಂಗ್ ಆರಂಭಿಸುವ ಬಗ್ಗೆ ಪ್ರಸ್ತಾಪಿಸಿದರೂ ಆವಾಗ ಅದು ಕೈಗೂಡಲಿಲ್ಲ. ಆದರೂ, ನಂತರ ಭಾರತದ ಮೊತ್ತ ಮೊದಲ ಗಣಕಯಂತ್ರ ಐ.ಎಸ್.ಐ.ನಲ್ಲೇ ಸ್ಥಾಪಿಸುವಂತಾಯಿತು. 1959ರಲ್ಲಿ ಐ.ಎಸ್.ಐ.ಯು ಭಾರತ ಸರಕಾರದ ಮೂಲಕ ರಾಷ್ಟ್ರೀಯ ಪ್ರಮುಖ ಸಂಸ್ಥೆಯಾಗಿ ಗುರುತಿಸಲ್ಪಟ್ಟಿತು. ಆ ಮೂಲಕ ಸಂಶೋಧನಾ ಕೇಂದ್ರವಲ್ಲದೆ ಸ್ವಾಯತ್ತತೆ ಪಡೆದ ವಿದ್ಯಾಸಂಸ್ಥೆಯಾಗಿಯೂ ಮಾನ್ಯತೆಯನ್ನು ಪಡೆಯಿತು. ತನ್ನದೇ ಹೆಸರಿನಲ್ಲಿ ಪದವಿ ಮತ್ತು ಪಿ.ಹೆಚ್.ಡಿ.ಗಳನ್ನು ಪ್ರದಾನ ಮಾಡುವಂತಾಯಿತು. ಭಾರತದಲ್ಲಿ ಸಂಖ್ಯಾಶಾಸ್ತ್ರದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ವಿನೂತನ ಪಠ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಕಾರಿಯಾಯಿತು.

ಅರವತ್ತರ ದಶಕದಲ್ಲಿ ಸಿ.ಆರ್. ರಾವ್ ಇವರ ಕೊಡುಗೆಗಳನ್ನು ಗುರುತಿಸಿ ಪ್ರತಿಷ್ಠಿತ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ, ಫೆಲೋಶಿಪ್ ಆಫ್ ರಾಯಲ್ ಸೊಸೈಟಿ ಮತ್ತು ಪದ್ಮಭೂಷಣ ಪ್ರಶಸ್ತಿಗಳು ಅವರನ್ನು ಅರಸಿ ಬಂದವು. ಅಲ್ಲದೆ, ಅಮೇರಿಕದ ಅನೇಕ ವಿಶ್ವವಿದ್ಯಾನಿಲಯಗಳಿಂದ ಅವರಿಗೆ ಗೌರವ ಪ್ರಾಧ್ಯಾಪಕರಾಗಿ ಉಪನ್ಯಾಸ ಸರಣಿಗಳನ್ನು ನಡೆಸಿ ಕೊಡಲು ಆಹ್ವಾನಗಳು ಬಂದವು. ನಂತರ 1979ರಲ್ಲಿ ಅವರು ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಪೂರ್ಣ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಮುಂದಿನ ಸುಮಾರು 20 ವರ್ಷಗಳ ಕಾಲ ತಮ್ಮ ಸಂಶೋಧನಾ ಕ್ಷೇತ್ರದ ಮಿತಿಯನ್ನು ವಿಸ್ತರಿಸುವಲ್ಲಿ ಅವಿರತ ಶ್ರಮಿಸಿದರು. 2001ರಲ್ಲಿ ಭಾರತದ ಎರಡನೇ ಅತ್ಯುನ್ನತ ಪ್ರಶಸ್ತಿಯೆನಿಸಿದ ಪದ್ಮವಿಭೂಷಣ ಮತ್ತು 2002ರಲ್ಲಿ ಅಮೇರಿಕದ ವಿಜ್ಞಾನ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ 'ನ್ಯಾಷನಲ್ ಮೆಡಲ್ ಆಫ್ ಸೈನ್ಸ್'ಗಳಿಗೆ ಭಾಜನರಾದರು.

'ಸಂಖ್ಯಾಶಾಸ್ತ್ರದ ಅಂತರಾಷ್ಟ್ರೀಯ ಪ್ರಶಸ್ತಿ'ಯು ಎರಡು ವರ್ಷಗಳಿಗೊಮ್ಮೆ ಕೊಡಮಾಡಲಾಗುತ್ತದೆ. ಇದನ್ನು ಪ್ರಾಯೋಗಿಕವಾಗಿ ಬಳಸಬಹುದಾದ ಹಾಗೂ ಇತರ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳಿಗೆ ಸಹಕಾರಿಯಾಗುವ ಸಂಖ್ಯಾಶಾಸ್ತ್ರದ ಪ್ರಬಲ ಮತ್ತು ಮೂಲ ಕಲ್ಪನೆಗಳಿಗೆ ಕಾರಣರಾದ ವ್ಯಕ್ತಿಗಳು ಅಥವಾ ತಂಡಗಳಿಗೆ ಪ್ರದಾನ ಮಾಡಲಾಗುತ್ತದೆ. ಸಿ. ಆರ್. ರಾಯರು ಪ್ರಮುಖ ಪಾತ್ರವಹಿಸಿ ಅಭಿವೃದ್ಧಿ ಪಡಿಸಿದ ಮೂರು ಮೂಲಭೂತ ಫಲಿತಾಂಶಗಳು ಆಧುನಿಕ ಸಂಖ್ಯಾಶಾಸ್ತ್ರದ ಪ್ರಬಲ ಸಾಧನಗಳಾಗಿದ್ದು ವೈಜ್ಞಾನಿಕ ಸಂಶೋಧನೆಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತಿದೆ. ಅವುಗಳೆಂದರೆ ಕ್ರ್ಯಾಮರ್–ರಾವ್ ಲೋಯರ್ ಬೌಂಡ್, ರಾವ್–ಬ್ಲಾಕ್‌ವೆಲ್ ಥಿಯರಂ ಮತ್ತು ಇನ್‌ಫರ್ಮೇಷನ್ ಜಿಯೋಮೆಟ್ರಿ. ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ಕುತೂಹಲ ಕೆರಳಿಸಿರುವ ಹಿಗ್ಸ್ ಬೋಸಾನ್ ಪ್ರಯೋಗಗಳ ಬಹುಪ್ರಮಾಣದ ದತ್ತಾಂಶ ಮತ್ತು ಫಲಿತಾಂಶಗಳನ್ನು ಯುಕ್ತ ರೀತಿಯಲ್ಲಿ

ಅರ್ಥೈಸಲು ಇನ್‌ಫರ್ಮೇಷನ್ ಜಿಯೋಮೆಟ್ರಿಯನ್ನು ಬಳಸಲಾಗುತ್ತಿದೆ. ಸಿಗ್ನಲ್ ಪ್ರೊಸೆಸಿಂಗ್, ಇಮೇಜ್ ಸೆಗ್ರಿಗೇಶನ್, ಅಂಟೆನಾ, ಡಾಟಾ ಸೈನ್ಸ್, ಅರ್ಟಿಫಿಷಲ್ ಇಂಟಲಿಜೆಂಸ್ ಮುಂತಾದ ಅನೇಕ ಆಧುನಿಕ ಅಂತರ್‌ಶಾಸ್ತ್ರೀಯ ತಂತ್ರಜ್ಞಾನಗಳಲ್ಲಿಯೂ ಪ್ರಗತಿ ಸಾಧಿಸಲು ಇದನ್ನು ಬಳಸಲಾಗುತ್ತಿದೆ.

2023ರ ಸಾಲಿನಲ್ಲಿ ಪ್ರೊಫೆಸರ್ ಸಿ.ಆರ್. ರಾವ್‌ರವರಿಗೆ ಈ ಪ್ರಶಸ್ತಿಯು ದೊರಕಿದ ಸಂದರ್ಭದಲ್ಲಿ ಅವರ ವಯಸ್ಸು 103 ವರ್ಷ. ಅದಾದ ಕೆಲವೇ ತಿಂಗಳಲ್ಲಿ 2023ನೇ ಆಗಸ್ಟ್ 22ರಂದು ಅಮೆರಿಕದ ನ್ಯೂಯಾರ್ಕ್‌ನಲ್ಲಿ ಕೊನೆಯುಸಿರೆಳೆದರು. ಸಂಖ್ಯಾಶಾಸ್ತ್ರ ಕ್ಷೇತ್ರಕ್ಕೆ ಸುಮಾರು 75 ವರ್ಷಗಳ ದೀರ್ಘಕಾಲ ಬೆಳಕನ್ನು ಚೆಲ್ಲಿದ ದೀಪವೊಂದು ಆರಿದರೂ ಬೆಳಕು ಇನ್ನೂ ಪಸರಿಸುತ್ತಿದೆ.

**ಮೂಲ:** (1) ಶ್ರೀನಿವಾಸ್ ಭೋಗ್ಲೆ, ಮಾಜಿ ವಿಜ್ಞಾನಿ, ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಶಾಲೆಗಳು (NAL), ಬೆಂಗಳೂರು. ಇವರು ಸಿ.ಆರ್. ರಾವ್ ಅವರ ವಿದ್ಯಾರ್ಥಿ.

Source: “The Rao Centuplicate” by Srinivas Bhogle former scientist of NAL and student of C.R. Rao.
*<https://bademian.wpcomstaging.com/2023/05/24/the-rao-centuplicate/?amp=1>*
(2) “Eminent Statistician C.R. Rao Awarded 2023 International Prize in Statistics” by Alexandria V. A.,
Source: *<https://statprize.org/2023-International-Prize-in-Statistics-Awarded-to-C-R-Rao.cfm>*

**ಸಂಕ್ಷಿಪ್ತ ಸಾರಾಂಶ:** ಡಾ. ಕರಿಂಬಿ ಕೆ. ಮಹೇಶ್, ಭೌತಶಾಸ್ತ್ರ ವಿಭಾಗ, ನಾಗಾರ್ಜುನ ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿ, ಮುದುಗುರ್ಕಿ, ವೆಂಕಟಗಿರಿ ಕೋಟೆ ಅಂಚೆ, ದೇವನಹಳ್ಳಿ, ಬೆಂಗಳೂರು.

ಡಾ. ಜಿ. ಎನ್. ದಯಾನಂದ, ಔಟ್ ಸ್ಟಾಂಡಿಂಗ್ ವಿಜ್ಞಾನಿ (ನಿವೃತ್ತ) – ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (CSIR) – ನವದೆಹಲಿ, 622, ಡಾ. ರಾಜ್ ಕುಮಾರ್ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.

* * * * * * *



# ಆಂತ್ವಾಇ ಲಾರೆನ್ ಲವಾಸಿಯೆ



**ಡಾ. ಜಿ. ನಾಗೇಂದ್ರಪ್ಪ**
ರಸಾಯನಶಾಸ್ತ್ರ ಪ್ರಾಧ್ಯಾಪಕರು (ವಿಶ್ರಾಂತ)
ಬೆಂಗಳೂರು ವಿಶ್ವವಿದ್ಯಾಲಯ

ಹದಿನೆಂಟನೇ ಶತಮಾನದ ಉತ್ತರಾರ್ಧವು ಆಧುನಿಕ ರಸಾಯನ ವಿಜ್ಞಾನದ ಪ್ರಾರಂಭ ಕಾಲವೆಂದು ಹೇಳಬಹುದು. ಅನೇಕ ಶತಮಾನಗಳಿಂದ ನಡೆದುಬಂದಿದ್ದ ಆಲ್‌ಕೆಮಿ ಕೊನೆಯಾಗಿ ಆಧುನಿಕ ರಸಾಯನವಿಜ್ಞಾನ ಆಗ ಕಾಲಿಟ್ಟಿತು. ಅಲ್‌ಕೆಮಿ ಹುಟ್ಟಿದ್ದು ಎರಡು ಮುಖ್ಯ ಕಾರ್ಯಗಳನ್ನು ಸಾಧಿಸಲು, ಒಂದು ಕೀಳು ಲೋಹಗಳನ್ನು ಚಿನ್ನವಾಗಿ ಪರಿವರ್ತಿಸುವುದು, ಎರಡು, ಮಾನವನನ್ನು ಅಮರನನ್ನಾಗಿಸಬಲ್ಲ ದ್ರವ್ಯವನ್ನು ತಯಾರಿಸುವುದು. ಆಲ್‌ಕೆಮಿಯಿಂದ ಇವೆರಡನ್ನೂ ಸಾಧಿಸಲಾಗದಿದ್ದರೂ, ಅದಕ್ಕಾಗಿ ಸಾಧನೆ ಮಾಡಿದವರು ಹಲವಾರು ಪ್ರಯೋಗ ಪದ್ಧತಿಗಳನ್ನು, ಪ್ರಯೋಗ ಸಲಕರಣೆಗಳನ್ನು ರೂಪಿಸಿದರು. (ನ್ಯೂಟನ್ ಸಹ ಆಲ್‌ಕೆಮಿ ಸಾಧಕರಾಗಿದ್ದರು). ಇವು ಕಾಲಾನಂತರದಲ್ಲಿ ಸುಧಾರಣೆಯಾಗಿ ಹೊಸ ರೂಪ ಪಡೆಯುತ್ತಾ ಬಂದು ಆಧುನಿಕ ವಿಜ್ಞಾನಕ್ಕೆ ಮೂಲ ಸಹಕಾರಿಯಾದವು.

ಹದಿನೇಳು–ಹದಿನೆಂಟನೆಯ ಶತಮಾನದ ವಿಜ್ಞಾನಿಗಳಲ್ಲಿ ಪ್ರಚಲಿತವಾಗಿದ್ದ ಇನ್ನೊಂದು ವಿಚಾರವೆಂದರೆ ಫ್ಲೋಜಿಸ್ಟನ್ ವಾದ. ಇದು ಜರ್ಮನ್ ಆಲ್‌ಕೆಮಿಸ್ಟರಾದ ಯೊಹಾನ್ ಯೊಆಕಿಮ್ ಬೆಖರ್‌ರಿಂದ ಮಂಡಿತವಾದ ಕಪೋಲ ಕಲ್ಪನೆಯಾಗಿತ್ತು. "ಫ್ಲೋಜಿಸ್ಟನ್" ಎಂದು ಹೆಸರು ಕೊಟ್ಟವರು ಇನ್ನೊಬ್ಬ ಜರ್ಮನ್ ಆಲ್‌ಕೆಮಿಸ್ಟ್ ಎರ್ನ್‌ಸ್ಟ್ ಸ್ಟಾಲ್. ಈ ಕಲ್ಪನೆಯು ವಸ್ತುಗಳ ದಹನಕ್ರಿಯೆಗೆ ಸಂಬಂಧಪಟ್ಟದ್ದು, ಅಲ್‌ಕೆಮಿ ಪ್ರಯೋಗಗಳಲ್ಲಿ ವಸ್ತುಗಳ ದಹನ ಮತ್ತು ಅದರಿಂದ ಬಂದ ಉತ್ಪನ್ನಗಳ ಪರೀಕ್ಷೆ ಮಾಡುವುದು, ಅವುಗಳ ಗುಣ ಲಕ್ಷಣಗಳನ್ನು ಕಂಡುಹಿಡಿಯುವುದು ಬಹು ಪ್ರಮುಖವಾದ ಚಟುವಟಿಕೆಯಾಗಿತ್ತು. ಫ್ಲೋಜಿಸ್ಟನ್ ವಾದಿಗಳ ಪ್ರಕಾರ ಒಂದು ವಸ್ತು ದಹಿಸಿದಾಗ ಅದರಿಂದ ಬಣ್ಣವಿಲ್ಲದ, ವಾಸನೆ ಇಲ್ಲದ ಮತ್ತು ಭಾರವಿಲ್ಲದ "ಫ್ಲೋಜಿಸ್ಟನ್" ಬಿಡುಗಡೆಯಾಗುತ್ತದೆ ಮತ್ತು ಉಳಿದ ಉತ್ಪನ್ನವು ಶುದ್ಧವಾದ ಮೂಲಧಾತುವಾಗಿರುತ್ತದೆ ಎಂಬ ನಂಬಿಕೆ ಇತ್ತು. ಈ ಫ್ಲೋಜಿಸ್ಟನ್ ವಾದದಲ್ಲಿ ದೃಢನಂಬಿಕೆ ಇಟ್ಟವರಲ್ಲಿ ಜೊಸೆಫ್ ಪ್ರೀಸ್ಟ್ಲಿ ಕೂಡ ಒಬ್ಬರು. ಅವರು ತಮ್ಮ ಆ ನಂಬಿಕೆಯನ್ನು ಕೊನೆಯವರೆಗೂ ಸಡಿಲಿಸಲಿಲ್ಲ. ಇದು ನಮಗೀಗ ವಿಚಿತ್ರವಾಗಿಯೂ ಗೊಂದಲಮಯವಾಗಿಯೂ ತೋರಬಹುದು. ಆದರೆ ಹದಿನೆಂಟನೆ ಶತಮಾನದ "ವಿಜ್ಞಾನಿಗಳಿಗೆ" ಅದು ವೈಜ್ಞಾನಿಕ ಸತ್ಯವಾಗಿತ್ತು. ಏಕೆಂದರೆ, ಆಗ ಧಾತುವೆಂದರೆ ಅವರು ತಿಳಿದದ್ದೇ ಬೇರೆ. ಪ್ರಯೋಗಗಳಲ್ಲಿ ಎಲ್ಲಾ ವಸ್ತುಗಳ ತೂಕಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ತೂಕ ಮಾಡುವುದಕ್ಕೆ ಒಂದು ಸರಿಯಾದ ಕ್ರಮವಿರಲಿಲ್ಲ. ಹೀಗಾಗಿ ಫ್ಲೋಜಿಸ್ಟನ್ ವಾದ ಆಗ ಗೊತ್ತಿದ್ದ ಕೆಲವು ಪ್ರಯೋಗಸಿದ್ಧ ಮಾಹಿತಿಗಳನ್ನು ವಿವರಿಸುವುದಕ್ಕೆ ಹೊಂದಿಕೆಯಾಗಿತ್ತು. ಆದ್ದರಿಂದ ಆ ವಾದ ಮನ್ನಣೆಗೆ ಪಾತ್ರವಾಗಿತ್ತು.



ಆಂತ್ವಾಇ ಲಾರೆನ್ ಲವಾಸಿಯೆ
(1743-1794)

ಇಂತಹ ಸಂದಿಗ್ಧ ಕಾಲದಲ್ಲಿ, ಗೊಂದಲಮಯ ವಾತಾವರಣದಲ್ಲಿ ನಿಜವಾದ ವೈಜ್ಞಾನಿಕ ವೈಚಾರಿಕತೆಯನ್ನು ಪ್ರಭಾವಯುತವಾಗಿ ಬಿತ್ತಿದವರಲ್ಲಿ ಅಗ್ರಗಣ್ಯರೆಂದರೆ ಆಂತ್ವಾಇ ಲಾರೆನ್ ಲವಾಸಿಯೆ. ಅವರು "ಫ್ಲೋಜಿಸ್ಟನ್ ಭೂತವನ್ನು" ರಸಾಯನಶಾಸ್ತ್ರದಿಂದ ಹೊಡೆದೋಡಿಸಿದ ಮಂತ್ರವಾದಿ, "ಆಧುನಿಕ ರಸಾಯನಶಾಸ್ತ್ರದ ಜನಕ" ಎಂದು ಹೆಸರಾಗಿದ್ದಾರೆ.

## ಬಾಲ್ಯ ಮತ್ತು ವಿದ್ಯಾಭ್ಯಾಸ

1743 ಆಗಸ್ಟ್ 26 ರಂದು ಪ್ಯಾರಿಸ್ ನ ಒಂದು ಶ್ರೀಮಂತ ಕುಟುಂಬದಲ್ಲಿ ಆಂತ್ವಾಇ ಜನಿಸಿದರು. ತಂದೆ ಜಾನ್ ಆಂತ್ವಾಇ ಪ್ರಸಿದ್ಧ ನ್ಯಾಯವಾದಿಗಳಾಗಿದ್ದರು. ತಾಯಿ ಎಮಿಲೀ ಪುಂಕ್ವೆಯು ಕೂಡ ಪ್ರಸಿದ್ಧ ನ್ಯಾಯವಾದಿಗಳ ಮನೆತನಕ್ಕೆ ಸೇರಿದವರು (ಎಮಿಲೀಯ ತಂದೆ ಪಾರ್ಲಿಮೆಂಟಿನ ನ್ಯಾಯವಾದಿಗಳಾಗಿದ್ದರು). ಆಂತ್ವಾಇ ಐದು

ವರ್ಷದವನಿದ್ದಾಗ ಎಮಿಲೀ ತೀರಿಕೊಂಡರು.. ಆಗ ಅವರಿಗೆ ಮೂರು ವರ್ಷದ ಹೆಣ್ಣು ಮಗು ಮೇರಿ ಇದ್ದಳು. ಹೀಗೆ ತಾಯಿಯ ಲಾಲನೆ ಪಾಲನೆಯಿಂದ ವಂಚಿತರಾದ ಇಬ್ಬರು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ತಂದೆಯ ಮೇಲೆ ಬಿತ್ತು. ಇದು ತಮ್ಮೊಬ್ಬರಿಂದಲೇ ಆಗದ ಕೆಲಸವೆಂದು ತಿಳಿದ ಅವರು ಮಕ್ಕಳನ್ನು ಕರೆದುಕೊಂಡು ತಮ್ಮ ತಾಯಿಯ ಮನೆಗೆ ಹೋದರು. ಎಮಿಲೀಯ ತಂಗಿ ಕಾಂಸ್ಟಾನ್ಸ್ ಪುಂಕ್ಟಿಯೂ ಕೂಡ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಮದುವೆ ಮಾಡಿಕೊಳ್ಳುವುದನ್ನು ಬಿಟ್ಟು ತನ್ನನ್ನು ಪೂರ್ಣ ತೊಡಗಿಸಿಕೊಂಡರು. ಜಾನ್ ಕೂಡ ಮಕ್ಕಳ ಏಳಿಗೆಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟರು.

ಉತ್ತಮ ವಿದ್ಯಾಭ್ಯಾಸದ ಮಹತ್ವವನ್ನು ತಿಳಿದಿದ್ದ ಚಿಕ್ಕಮ್ಮ 1954ರಲ್ಲಿ ಆಂತ್ವಾಇನನ್ನು ವಿಜ್ಞಾನ ಮತ್ತು ಗಣಿತಶಾಸ್ತ್ರಗಳ ಅಧ್ಯಯನಕ್ಕೆ ಪ್ರಸಿದ್ಧವಾಗಿದ್ದ ಮಜಾರಿನ್ ಕಾಲೇಜಿಗೆ ಸೇರಿಸಿದರು. ಅಲ್ಲಿ ಪ್ರಸಿದ್ಧ ಖಗೋಳ ವಿಜ್ಞಾನಿ ಲೂಯಿ ಡೆ ಲಾಕೇಲ್, ಭೂವಿಜ್ಞಾನಿ ಜಾನ್ ಏಟಿಯನ್ ಗ್ಯುಟ್ಟಾರ್ಡ್, ಸಸ್ಯವಿಜ್ಞಾನಿ ಬೆರ್ನಾರ್ಡ್ ಡೆ ಜುಸ್ತಿಯು ಮತ್ತು ರಸಾಯನ ವಿಜ್ಞಾನಿ ಗಿಲ್ಲೌಮ್ ಫ್ರಾಂಸ್ವಾ ರೂಎಲ್ – ಇವರುಗಳ ವಿದ್ಯಾರ್ಥಿಯಾಗಿ ಆಂತ್ವಾಇ ಶಿಕ್ಷಣ ಪಡೆದರು. ಇದರಿಂದ ಅವರಿಗೆ ಕಾನೂನು ವೃತ್ತಿಯನ್ನು ಕೈಗೊಳ್ಳಲು ಅನುಮತಿ ದೊರೆತರೂ ಅದನ್ನು ಅವರು ಎಂದೂ ಮಾಡಲೇ ಇಲ್ಲ. ಬದಲಾಗಿ ತಮ್ಮಲ್ಲಿದ್ದ ವಿಜ್ಞಾನದಲ್ಲಿನ ಅದಮ್ಯ ಆಸಕ್ತಿಗೆ ಮಣಿದು ಖನಿಜಶಾಸ್ತ್ರ ಮತ್ತು ರಸಾಯನಶಾಸ್ತ್ರಗಳ ಅಭ್ಯಾಸವನ್ನು ಮುಂದುವರಿಸಿದರು.

ಲವಾಸಿಯೆ ತಮ್ಮ ಶಾಲಾ–ಕಾಲೇಜು ಅಭ್ಯಾಸದಲ್ಲಿ ಉತ್ತಮ ವಿದ್ಯಾರ್ಥಿಯಾಗಿದ್ದರು. ಹಲವಾರು ಪಾರಿತೋಷಕಗಳನ್ನು ಪಡೆದರು. ಮಜಾರಿನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಪ್ರಾಧ್ಯಾಪಕರಿಗೆ ಪ್ರಯೋಗ ಮಾಡುವಲ್ಲಿ ಸಹಾಯ ಮಾಡುತ್ತಿದ್ದರಲ್ಲದೇ ತವೇ ಸ್ವತಃ ಅನೇಕ ಪ್ರಯೋಗಗಳನ್ನೂ ಮಾಡಿದರು. ಅವರು ಭೂವಿಜ್ಞಾನದಲ್ಲಿ ಮಾಡಿದ ಕೆಲಸದಿಂದಲೂ ಮತ್ತು ದೊಡ್ಡ ನಗರಗಳ ಬೀದಿಗಳಿಗೆ ದೀಪಗಳನ್ನು ಒದಗಿಸುವ ವ್ಯವಸ್ಥೆಯನ್ನು ಹೇಗೆ ಮಾಡಬಹುದೆಂಬುದನ್ನು ಕುರಿತು ಬರೆದ ಪ್ರಬಂಧಕ್ಕಾಗಿಯೂ ಅವರಿಗೆ 25ನೇ ವಯಸ್ಸಿನಲ್ಲಿಯೇ ಫ್ರಾನ್ಸ್ ದೇಶದ ರಾಯಲ್ ವಿಜ್ಞಾನ ಅಕಾಡೆಮಿಯ ಸದಸ್ಯತ್ವವನ್ನು ಕೊಡಮಾಡಲಾಯಿತು. ಆಗ (1768ರಲ್ಲಿ) ಆಕಾಡೆಮಿಯಲ್ಲಿ ಪ್ರಥಮ ಬಾರಿಗೆ "ಜಿಪ್ಸಮ್ ಖನಿಜದ ವಿಶ್ಲೇಷಣೆ ಮತ್ತು ಅದನ್ನು ಹೆಚ್ಚಿನ ಶಾಖದಲ್ಲಿ ಕಾಯಿಸಿ ಪ್ಲಾಸ್ಟರ್ ಆಫ್ ಪ್ಯಾರಿಸ್ ತಯಾರಿಕೆ" ಎಂಬ ಉಪನ್ಯಾಸವನ್ನು ಮಾಡಿದರು.

**ಅಂದಿನ ರಾಜಕೀಯ ಪರಿಸ್ಥಿತಿ**

ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಫ್ರಾನ್ಸ್ ದೇಶದಲ್ಲಿ 15ನೇ ಲೂಯಿ ನಂತರ 16ನೇ ಲೂಯಿ ರಾಜನ ಆಡಳಿತ ನಡೆಯುತ್ತಿತ್ತು. ಆಗ ಬಹುತೇಕ ಯೂರೋಪಿನ ಎಲ್ಲ ದೇಶಗಳಲ್ಲೂ, ಸಾಮಾಜಿಕ ಆರಾಜಕತೆ ಉಲ್ಬಣಿಸಿತ್ತು. ಅದೂ ಫ್ರಾನ್ಸ್ ದೇಶದಲ್ಲಿ ಅದರ ಪ್ರಖರತೆ ಇನ್ನೂ ಹೆಚ್ಚಾಗಿತ್ತು. ದೀರ್ಘಕಾಲದ ಬರಗಾಲದಿಂದ ರೈತರ ಜೀವನ ಬಹಳ ಕಠಿಣ ಪರಿಸ್ಥಿತಿಯಲ್ಲಿತ್ತು. ಸಣ್ಣಪುಟ್ಟ ದಂಗೆಗಳು, ಹಿಂಸಾಚಾರಗಳಲ್ಲಿ ತೊಡಗಿದ ಗುಂಪುಗಳ ಹಾವಳಿ ಸಾಮಾನ್ಯವಾಗಿ ನಡೆಯುತ್ತಲೇ ಇರುತ್ತಿದ್ದವು. ಪರಿಸ್ಥಿತಿ ಹೀಗಿದ್ದರೂ ಸರ್ಕಾರವು ಕಂದಾಯ ವಸೂಲಿ ಮಾಡುವುದನ್ನು ಮಾತ್ರ ಕಡಿಮೆ ಮಾಡಲಿಲ್ಲ. ಅಲ್ಲದೇ ಕಂದಾಯ ವಸೂಲಿಯನ್ನು ಖಾಸಗಿ ಕಂಪನಿಗಳಿಗೆ ಒಪ್ಪಿಸಲಾಗಿತ್ತು. ರಾಜ್ಯಕ್ಕೆ ಕಂದಾಯ ಸಂಗ್ರಹಿಸುವುದು ಈ ಕಂಪನಿಗಳ ಕರ್ತವ್ಯವಾಗಿತ್ತು. ಈ ಕಂಪನಿಗಳ ವಾರಸುದಾರರನ್ನು "ಕಂದಾಯ ರೈತರು" ಎಂದು ಹೆಸರಿಸಲಾಗಿತ್ತು. ಇವರು ಎಲ್ಲಾ ತರಹದ ಕಂದಾಯವನ್ನು ಸಂಗ್ರಹಿಸುತ್ತಿದ್ದರು. ದೇಶಕ್ಕೆ ಅಮದು ಮಾಡಿಕೊಳ್ಳುತ್ತಿದ್ದ ಸರಕುಗಳ ಅಮದು ಸುಂಕವನ್ನು ಕೂಡ ಇವರೇ ಸಂಗ್ರಹಿಸಲು ಅನುಮತಿ ಇತ್ತು. ಕಂದಾಯ ರೈತರಲ್ಲಿ ಬಹಳಷ್ಟು ಜನ ತಮ್ಮ ಅಧಿಕಾರವನ್ನು ದುರುಪಯೋಗಿಸಿಕೊಂಡು ಅಕ್ರಮವಾಗಿ ಕಂದಾಯ ಮತ್ತು ಸುಂಕಗಳನ್ನು ವಸೂಲಿ ಮಾಡಿ ನಿಯಮಬಾಹಿರವಾಗಿ ಹಣ ಗಳಿಸಿ ಶ್ರೀಮಂತರಾಗುತ್ತಿದ್ದರು; ಗಳಿಸಿದ ಹಣವನ್ನು ದುಂದುಗಾರಿಕೆಯ ಜೀವನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಈ ಅಕ್ರಮ ವ್ಯವಹಾರದ ದುಷ್ಪರಿಣಾಮವನ್ನು ವ್ಯಾಪಾರಿಗಳೂ, ಬಡವರೂ ಅನುಭವಿಸಬೇಕಾಗುತ್ತಿತ್ತು. ಹೀಗಾಗಿ "ಕಂದಾಯ ರೈತರನ್ನು" ಬರಗಾಲದಿಂದ ಬಳಲುತ್ತಿದ್ದ ಕೃಷಿ ರೈತರೂ ಮತ್ತು ವ್ಯಾಪಾರಸ್ಥರೂ ಬಹಳವಾಗಿ ದ್ವೇಷಿಸುತ್ತಿದ್ದರು. ಇವರನ್ನು ಹತೋಟಿಯಲ್ಲಿಡದ 16ನೇ ಲೂಯಿ ರಾಜನೂ ಕೂಡ

ಪ್ರಜೆಗಳ ಗೌರವವನ್ನು ಕಳೆದುಕೊಂಡಿದ್ದನು. ಈ ಪರಿಸ್ಥಿತಿ ಮುಂದುವರಿದು ಕೊನೆಗೆ 1780 ದಶಕದ ಕೊನೆಯ ವೇಳೆಗೆ ಉಲ್ಬಣಗೊಂಡು ಕ್ರಾಂತಿಯ ರೂಪ ತಳೆದು ಹಿಂಸೆ ಪರಾಕಾಷ್ಠ ಮುಟ್ಟಿತು. ರಾಜ್ಯವು ಕ್ರಾಂತಿಕಾರರ ಕೈವಶವಾಯಿತಲ್ಲದೇ ಸರ್ಕಾರಕ್ಕೆ ಕೆಲಸ ಮಾಡುತ್ತಿದ್ದ ಅಧಿಕಾಂಶ ಜನರನ್ನೆಲ್ಲಾ "ಗಿಲ್ಲೊಟಿನ್" ಶಿಕ್ಷೆಗೆ ಒಳಪಡಿಸಲಾಯಿತು. ಇದಕ್ಕೆ ಲವಾಸಿಯೆ ಕೂಡ 8ನೇ ಮೇ 1794ರಂದು ತಲೆ ಕೊಡಬೇಕಾಯಿತು. ಕ್ರಾಂತಿಕಾರರು ಲವಾಸಿಯೆ ವಿಜ್ಞಾನಕ್ಕೆ ನೀಡಿದ ಆಗಾಧ ಕೊಡುಗೆ, ಜನಗಳಿಗೆ ಮಾಡಿದ ಹಲವು ಉಪಕಾರಗಳು – ಇವು ಯಾವುವನ್ನೂ ಪರಿಗಣಿಸಲಿಲ್ಲ. ಲವಾಸಿಯೆ ಮಾಡಿದ್ದ ಒಂದೇ ಒಂದು ತಪ್ಪು ಎಂದರೆ ಅವರು ಕೂಡ ಒಬ್ಬ "ಕಂದಾಯ ರೈತ"ರಾಗಿ ಕೆಲಸ ಮಾಡುತ್ತಿದ್ದುದು. ಅವರು ಈ ಕೆಲಸದಲ್ಲಿ ಸತ್ಯಸಂಧರಾಗಿ ನಡೆದುಕೊಂಡು ಯಾರಿಗೂ ಅನ್ಯಾಯ ಮಾಡದೇ ಅಕ್ರಮವಾಗಿ ವ್ಯವಹರಿಸದೇ ಇದ್ದರೂ ಈ ಶಿಕ್ಷೆಯನ್ನು ಅನುಭವಿಸಬೇಕಾಯಿತು. ದುಷ್ಟರ ಗುಂಪಿನಲ್ಲಿದ್ದ ಶಿಷ್ಟನ ತಲೆಯೂ ಹೋಯಿತು. "ಅಂತಹ ತಲೆ ತೆಗೆಯಲು ಕೇವಲ ಒಂದು ಕ್ಷಣ, ಆದರೆ ಅಂತಹ ಇನ್ನೊಬ್ಬ ವ್ಯಕ್ತಿ ಹುಟ್ಟಿಬರಲು ಒಂದು ನೂರು ವರ್ಷವೂ ಸಾಕಾಗಲಾರದು", ಎಂದು ಲವಾಸಿಯೆ ಬಗ್ಗೆ ಮಹಾನ್ ಗಣಿತ ವಿಜ್ಞಾನಿ ಜೋಸೆಫ್ ಲಾಗ್ರೆಂಜ್ ಹೇಳಿದ್ದಾರೆ.

**ಸರ್ಕಾರಿ ಕೆಲಸ ಮತ್ತು ಗೃಹಜೀವನ**

ತಾವು ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರೂ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಿಕೊಂಡು ಹೋಗಲು ಸಾಕಷ್ಟು ಹಣದ ಅವಶ್ಯಕತೆ ಲವಾಸಿಯೆಗೆ ಇತ್ತು. ಇದಕ್ಕೆ ಬೇಕಾದ ಹಣ ಸಂಪಾದನೆ ಮಾಡಲು 1768ರಲ್ಲಿ ಫರ್ಮಿಯೆ–ಜೆನೆರಲ್ (ಕಂದಾಯ ರೈತ) ಬೋಡಾನ್ ಅವರಲ್ಲಿ ಸಹಾಯಕರಾಗಿ ಸೇರಿಕೊಂಡು ಕಂದಾಯ ಸಂಗ್ರಹಣೆಯಲ್ಲಿ ತೊಡಗಿದರು. ಬಿಡುವಿನ ವೇಳೆ, ರಾತ್ರಿ ವೇಳೆಯಲ್ಲಿ ತಮ್ಮ ಪ್ರಯೋಗಗಳಲ್ಲಿ ನಿರತರಾಗುತ್ತಿದ್ದರು. ಸ್ವಲ್ಪ ಕಾಲದ ನಂತರ ಲವಾಸಿಯೆ ತಾವೇ ಫರ್ಮಿಯೆ ಆದರು. ಅಂದರೆ ತಮ್ಮದೇ ಕಂದಾಯ ಸಂಗ್ರಹಣೆಯ ಕಂಪನಿ ಮಾಡಿಕೊಂಡರು. ಅವರು ಬೇರೆ ಕಂದಾಯ ಅಧಿಕಾರಿಗಳಂತೆ ದುರಾಶೆಗೀಡಾಗದೆ ನ್ಯಾಯ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರು. ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ಬದಲಾಗಿ ರೈತರಿಗೆ ಸಹಾಯ ಮಾಡುತ್ತಿದ್ದರು. ತಮ್ಮ ಜಮೀನಿನಲ್ಲಿ ಕೃಷಿಪ್ರಯೋಗಗಳನ್ನು ಮಾಡಿ ಹೆಚ್ಚು ಬೆಳೆತೆಗೆಯುವ ವಿಧಾನಗಳನ್ನೂ ಹೈನು ಅಭಿವೃದ್ಧಿ ಕ್ರಮಗಳನ್ನೂ ಕಂಡುಹಿಡಿದು ರೈತರಿಗೂ ಈ ವಿಧಾನಗಳನ್ನು ಹೇಳಿಕೊಟ್ಟು ಅವರ ಕೃಷಿ ವೃದ್ಧಿಯಾಗಲು ಅನುವು ಮಾಡಿಕೊಡುತ್ತಿದ್ದರು.

1771ರಲ್ಲಿ ಆಂತ್ವಾಇ ಲವಾಸಿಯೆ 13 ವರ್ಷದ ಹದಿಹರೆಯಕ್ಕೆ ಕಾಲಿಟ್ಟ ಮೇರೀ–ಆನ್ನ್ ಪಿಯರೆಟ್ ಪಾಲ್ಸ್‌ರನ್ನು ಮದುವೆಯಾದರು. ಮೇರಿ–ಆನ್ನ್ ಲವಾಸಿಯೆರವರ ಫರ್ಮಿಯೆ ಕಂಪನಿಯ ಸಹಮಾಲಿಕರ ಮಗಳು, ಒಳ್ಳೆಯ ಪ್ರತಿಭಾವಂತೆ, ಗಂಡನಿಗೆ ಎಲ್ಲ ರೀತಿಯಿಂದಲೂ ಜೊತೆಗಾತಿಯಾಗಿ ಸಮನಾಗಿ ನಿಂತು ಕೆಲಸ ಮಾಡುತ್ತಿದ್ದರು. ವೈಜ್ಞಾನಿಕ ಚಟುವಟಿಕೆಗಳಲ್ಲಿಯಂತೂ ಮೇರಿ–ಆನ್ನ್ ಆಂತ್ವಾಇರವರಿಗೆ ಎಲ್ಲ ರೀತಿಯಲ್ಲೂ ಸಹಾಯಕರಾಗಿದ್ದರು. ಮುಂದೆ ಆಕೆ ಇಂಗ್ಲಿಷ್ ಭಾಷೆಯನ್ನು ಕಲಿತು ಪ್ರೀಸಸ್ಟ್ ಲಿ ಮತ್ತಿತರ ವಿಜ್ಞಾನಿಗಳ ಬರಹಗಳನ್ನು ಫ್ರೆಂಚ್ಗೆ ಅನುವಾದ ಮಾಡಿಕೊಡುತ್ತಿದ್ದರು. ಚಿತ್ರಕಲೆ ಕೆತ್ತನೆ ಕೆಲಸಗಳಲ್ಲಿ ನಿಪುಣೆಯಾಗಿ ಲವಾಸಿಯೇ ಬರೆಯುತ್ತಿದ್ದ ಪುಸ್ತಕಗಳಲ್ಲಿ ಮತ್ತಿತರ ಬರಹಗಳಲ್ಲಿ ಪ್ರಯೋಗಾಲಯ ಮತ್ತು ಪ್ರಯೋಗ ಸಲಕರಣೆಗಳ ಚಿತ್ರಗಳನ್ನು ಯಥಾವತ್ತಾಗಿಯೂ ಸುಂದರವಾಗಿಯೂ ಬಿಡಿಸುತ್ತಿದ್ದರು. ವಿಜ್ಞಾನದಲ್ಲಿ ಪರಿಣಿತಿ ಬೆಳೆಸಿಕೊಂಡು ವೈಜ್ಞಾನಿಕ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಹೀಗೆ ಮೇರಿ–ಆನ್ನ್ ಲವಾಸಿಯೆರವರ ವೈಜ್ಞಾನಿಕ ಸಹೋದ್ಯೋಗಿಯಂತಿದ್ದರೂ ಅವರಿಗೆ 18ನೇ ಶತಮಾನದ ಯೂರೋಪಿನಲ್ಲಿ  ಸಾಕಷ್ಟು ಮನ್ನಣೆ, ಅವರು ಹೆಂಗಸೆಂಬ ಕಾರಣದಿಂದ ದೊರೆಯಲಿಲ್ಲ.



ಮೇರಿ–ಆನ್ನ್ ಆಂತ್ವಾಇ ಅವರೊಡನೆ

ಲವಾಸಿಯೆರನ್ನು "ರಸಾಯನಶಾಸ್ತ್ರದ ಜನಕ" ಎಂದು ಕರೆಯಬಹುದಾದರೆ ಮೇರಿ-ಆನ್ನ್ ರನ್ನು "ರಸಾಯನಶಾಸ್ತ್ರದ ಜನನಿ" ಎಂದು ಕರೆಯಬಹುದು ಎಂಬ ಅಭಿಪ್ರಾಯವಿದೆ. ಸಂಶೋಧನೆ, ಪ್ರಯೋಗಾಲಯ ಚಟುವಟಿಕೆಗಳೊಡನೆ ಫರ್ಮಿಯ-ಜೆನೆರಲ್ ಕೆಲಸವನ್ನು ಲವಾಸಿಯೆ ಬಹಳ ದಕ್ಷತೆಯಿಂದ ಮಾಡುತ್ತಿದ್ದರು. ಜೊತೆಗೆ ಕೃಷಿಯಲ್ಲಿಯೂ ಭಾಗಿಯಾಗುತ್ತಿದ್ದರು. 1775ರಲ್ಲಿ ಲವಾಸಿಯೆ ರಾಯಲ್ ಗನ್‌ಪೌಡರ್ ಮತ್ತು ಸಾಲ್ಫ್ ಪೀಟರ್ (ಸಿಡಿಮದ್ದು ಮತ್ತು ಪೆಟ್ಲುಪು) ಆಡಳಿತ ಮಂಡಳಿಯ ಕಮಿಷನರ್ ಆಗಿ ನೇಮಕವಾದರು. ಕೂಡಲೇ ಫಿರಂಗಿಮದ್ದಿನ ಸಂಯೋಜನೆಯನ್ನು ಸುಧಾರಿಸುವ ಕಾರ್ಯದಲ್ಲಿ ತೊಡಗಿದರು. ಪೆಟ್ಲುಪ್ಪಿನ ಉತ್ಪಾದನೆಯನ್ನು ಹೆಚ್ಚಿಸಿದರು. ಇದರಿಂದ ಸಾರ್ವಜನಿಕರು ತಮ್ಮ ಮನೆಗಳಲ್ಲಿಟ್ಟುಕೊಂಡ ಪೆಟ್ಲುಪ್ಪನ್ನು ಸರ್ಕಾರವು ತನಗೆ ಬೇಕಾದಾಗ ಬಲವಂತವಾಗಿ ಕಿತ್ತುಕೊಳ್ಳುವುದು. ತಪ್ಪಿತು.

ಲವಾಸಿಯೆ ಕೃಷಿ ಸಮಿತಿಯ ಕಾರ್ಯದರ್ಶಿಯಾಗಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದರು. ವ್ಯವಸಾಯವನ್ನು ಉತ್ತಮಪಡಿಸಲು ಬೇಕಾಗುವ ವರದಿಗಳನ್ನೂ ಮತ್ತು ಮಾಹಿತಿ ಕೈಪಿಡಿಗಳನ್ನು ತಯಾರಿಸಿ ರೈತರಿಗೆ ವಿತರಿಸುತ್ತಿದ್ದರು. ಇದರಿಂದ ರೈತರು ಕೃಷಿ ಮತ್ತು ಹೈನುಗಾರಿಕೆಯಲ್ಲಿ ಸಮೃದ್ಧಿ ಹೊಂದಲು ಸಾಧ್ಯವಾಯಿತು. ಇಂತಹ ವರದಿ, ಕೈಪಿಡಿಗಳನ್ನು ತಾವೇ ಸ್ವತಃ ಫ್ರೆಕೀನ್ ಹತ್ತಿರದಲ್ಲಿ ವ್ಯವಸಾಯ ಮಾಡಿ ಪಡೆದ ಅನುಭವದ ಆಧಾರದ ಮೇಲೆ ಬರೆಯುತ್ತಿದ್ದರು. ಹೀಗೆ ತಮ್ಮ ಪ್ರಯೋಗಗಳನ್ನು ಕೊಠಡಿಗಳೊಳಗೆ ಮಿತಿಗೊಳಿಸದೇ ಹೊರಾಂಗಣದಲ್ಲಿಯೂ ನಡೆಸಿ ವಿಜ್ಞಾನದ ಹರವನ್ನು ಹೆಚ್ಚಿಸಿದರು.

ರೈತರಿಗೆ ಕೃಷಿಮಾಹಿತಿ ಒದಗಿಸುವುದಲ್ಲದೇ ಅವರಿಗೆ ಲೆಕ್ಕಪತ್ರವಿಡುವ ವಿಧಾನವನ್ನೂ ಕಲಿಸಿಕೊಡುತ್ತಿದ್ದರು. ತಮ್ಮ ಅಧಿಕಾರ ಸ್ಥಾನದಿಂದ ಬಡವರಿಗೆ ಮಾಡಬಹುದಾದ ಸಹಾಯವನ್ನೇ ಮಾಡುತ್ತಿದ್ದರು. 1788ರ ಕ್ಷಾಮದಲ್ಲಿ ತಮ್ಮ ಸ್ವಂತ ಹಣದಿಂದಲೇ ಸಂಕಷ್ಟದಲ್ಲಿದ್ದ ಹಳ್ಳಿಗಳಿಗೆ ದವಸಗಳನ್ನು ಹಂಚಿದರು. ಹೀಗೆ ಲವಾಸಿಯೆ ತಮ್ಮ ಶ್ರೀಮಂತಿಕೆ, ಅಧಿಕಾರದ ಸ್ಥಾನಗಳನ್ನು ಸಾರ್ವಜನಿಕರ ಹಿತಕ್ಕಾಗಿಯೇ, ಬಡವರ ಕಷ್ಟನಿವಾರಣೆಗಾಗಿಯೇ ಉಪಯೋಗಿಸಿದರು; ವೈಜ್ಞಾನಿಕ ಚಟುವಟಿಕೆಗಳಿಗೆ ಬಳಸಿಕೊಂಡರು. ಸಿಡಿಮದ್ದು ಮತ್ತು ಪೆಟ್ಲುಪು ಆಡಳಿತ ಮಂಡಳಿಯ ಕಮಿಷನರ್ ಅಧಿಕಾರ ವಹಿಸಿಕೊಂಡಾಗ ಆಗಿನ ಕಾಲಕ್ಕೆ ಬಹಳ ಉತ್ತಮವಾದ ಒಂದು ಪ್ರಯೋಗಾಲಯವನ್ನು ಕಟ್ಟಿಸಿದರು ಮತ್ತು ಅದರ ಮೂಲಕ ಯೂರೋಪಿನ ವಿಜ್ಞಾನಿಗಳ ಪರಸ್ಪರ ಸಂಪರ್ಕಕ್ಕೆ ಅನುಕೂಲತೆ ಮಾಡಿದರು.

ಇಂತಹ ಉದಾರಿ, ಸಾರ್ವಜನಿಕರ ಹಿತಚಿಂತಕ ಮತ್ತು ಅವರ ಭಾವನೆಗಳಿಗೆ ಸ್ಪಂದಿಸುವವರು, ವಿಜ್ಞಾನಿಗಳ ಪ್ರೋತ್ಸಾಹಕ, ಆಧುನಿಕ ರಸಾಯನವಿಜ್ಞಾನದ ಮಾರ್ಗದರ್ಶಿ ಲವಾಸಿಯೆ ಕೂಡ ಫ್ರೆಂಚ್ ಕ್ರಾಂತಿಯ ಪ್ರವಾಹಕ್ಕೆ ಸಿಕ್ಕಿ ಗಿಲ್ಲೊಟಿನ್‌ಗೆ ಬಲಿಯಾಗಬೇಕಾಯಿತು. ಫ್ರೆಂಚ್ ಕ್ರಾಂತಿಯು 1788ರ ಕ್ಷಾಮದಿಂದ ಪ್ರಾರಂಭವಾಗಿ ಅದರ ಜ್ವಾಲೆ ಅವ್ಯಾಹತವಾಗಿ ಉರಿಯಿತು. 1791ರಲ್ಲಿ ಫರ್ಮಿಯೆ-ಜೆನೆರಲ್‌ರನ್ನು ದಮನ ಮಾಡಲಾಯಿತು. ಇತರ ಫರ್ಮಿಯೆಗಳ ಜೊತೆಯಲ್ಲಿ ಲವಾಸಿಯೆ ಕೂಡ ಕ್ರಾಂತಿಕಾರಿ ಜಾನ್-ಪಾಲ್ ಮಾರಾಟ್‌ನ ದ್ವೇಷಪೂರಿತ ನಂಜಿನ ಬರಹಗಳಿಗೆ ಗ್ರಾಸವಾದರು. ಲವಾಸಿಯೆ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಗನ್ ಪೌಡರ್ ಕಮಿಷನರ್ ಹುದ್ದೆಯಿಂದ ಒತ್ತಾಯಪೂರ್ವಕವಾಗಿ ಅವರ ರಾಜೀನಾಮೆ ಪಡೆಯಲಾಯಿತು ಮತ್ತು ಅವರನ್ನು ರಾಯಲ್ ತೋಪುಖಾನೆಯಿಂದ ಹೊರಹಾಕಲಾಯಿತು. ಕ್ರಾಂತಿ ಪ್ರಬಲವಾದಂತೆ ಫರ್ಮಿಯೆಗಳನ್ನೆಲ್ಲಾ ಸರ್ಕಾರಿ ಭದ್ರತಾ ಪಡೆಯವರು ಬಂಧಿಸಿದರು. 24ನೇ ಡಿಸೆಂಬರ್, 1793ರಂದು ಸೈನಿಕರು ಲವಾಸಿಯ ಪ್ರಯೋಗಾಲಯಕ್ಕೆ ನುಗ್ಗಿ ನಡೆಯುತ್ತಿದ್ದ ಪ್ರಯೋಗಗಳನ್ನು ಧ್ವಂಸ ಮಾಡಿ, ಲವಾಸಿಯೆ ಅವರನ್ನು ಬಂಧಿಸಿದರು. 1794ರ ಮೇ 7ರಂದು ಕ್ರಾಂತಿಕಾರರ ವಿಚಾರಣಾ ಮಂಡಲಿಯವರು ಲವಾಸಿಯೆರ ವಿಚಾರಣೆ ನಡೆಸಿದರು. ಅದು ಒಂದು ಕೇವಲ ಸೋಗಿನ ವಿಚಾರಣೆಯಾಗಿತ್ತು. ಲವಾಸಿಯರ ಬೆಂಬಲಿಗರು ಅಂತಹ ಒಳ್ಳೆಯ ಗುಣಗಳನ್ನೇ ಹೊಂದಿದ ಆ ಪ್ರತಿಭಾವಂತ ವಿಜ್ಞಾನಿಗೆ ಶಿಕ್ಷೆ ವಿಧಿಸಬಾರದೆಂದು ಕೋರಿಕೊಂಡರು. ಆದರೆ ವಿಚಾರಣಾ ಮಂಡಲಿಯ ಅಧ್ಯಕ್ಷ ಕೊಫಿನ್ ಹಾಲ್, "ಪ್ರಜಾಪ್ರಭುತ್ವಕ್ಕೆ ವಿಜ್ಞಾನಿಯಿಂದ ಯಾವ ಪ್ರಯೋಜನವೂ ಇಲ್ಲ", ಎಂದು ಸ್ಪಷ್ಟಪಡಿಸಿದರು. ಹೀಗೆ ಲವಾಸಿಯೆ ತಮ್ಮ 51ನೇ ವಯಸ್ಸಿನಲ್ಲಿ ಕ್ರಾಂತಿಯ ಅತಿರೇಕದ ಉತ್ಸಾಹಿಗಳ ವಿಲಕ್ಷಣ ತೀರ್ಮಾನಕ್ಕೆ ತಮ್ಮ ಮಾವ ಜಾಕ್ ಪಾಲ್ಸ್ ಮತ್ತಿತರ ಫರ್ಮಿಯೆಗಳ ಜೊತೆಯಲ್ಲಿ ಬಲಿಪಶುವಾದರು.

## ವೈಜ್ಞಾನಿಕ ಸಾಧನೆಗಳು

ಇಂದಿನ ಅದ್ಭುತವಾದ ಪ್ರಯೋಗಗಳಿಗೆ ಹೋಲಿಸಿದರೆ ಲವಾಸಿಯೆ ನಡೆಸುತ್ತಿದ್ದ ಪ್ರಯೋಗಗಳು ತೀರಾ ಸರಳ ಎನಿಸಬಹುದು, ಅದರ 18ನೇ ಶತಮಾನದಲ್ಲಿದ್ದ ಸ್ಥಿತಿಯಲ್ಲಿ ನೋಡಿದರೆ ಅವು ವಿಜ್ಞಾನದ ಮಾರ್ಗದಲ್ಲಿ ಪ್ರಮುಖ ಹೊಸ ತಿರುವಾಗಿದ್ದವು. ಒಂದು ಶತಮಾನದಿಂದ ಬೇರುಬಿಟ್ಟಿದ್ದು ಯಾರೂ ಪ್ರಶ್ನಿಸದಿದ್ದ ಫ್ಲೋಜಿಸ್ಟನ್ ವಾದವನ್ನು ಪ್ರಯೋಗಗಳ ಮೂಲಕ ಹುರುಳಿಲ್ಲದ ವಾದವೆಂದು ತೋರಿಸಿಕೊಟ್ಟು ರಸಾಯನಶಾಸ್ತ್ರಕ್ಕೆ ಆಧುನಿಕ ರೂಪದ ಮೊದಲ ಮೆಟ್ಟಿಲು ಕಟ್ಟಿದರು. ಲವಾಸಿಯ 1770–1790ರವರೆಗೆ ಯೂರೋಪಿನಲ್ಲಿ ನಡೆದ ತೀವ್ರ ವೈಜ್ಞಾನಿಕ ಬೆಳವಣಿಗೆಯ ನೇತಾರರಾಗಿದ್ದರು. ಫ್ಲೋಜಿಸ್ಟನ್ ವಾದ ಅಥವಾ ದಹನತತ್ವವನ್ನು ಅಲ್‌ಕೆಮಿಸ್ಟರಾದ (ರಸವಾದಿಗಳಾದ) ಜರ್ಮನಿಯ ಯೊಹಾನ್ ಬೆಖರ್ ಮತ್ತು ಎರ್ನೆಸ್ಟ್ ಸ್ಟಾಲ್ 17ನೇ ಶತಮಾನದ ಕೊನೆಯಲ್ಲಿ ಹುಟ್ಟುಹಾಕಿದರು. ಈ ವಾದದ ಪ್ರಕಾರ ವಸ್ತುಗಳು ದಹಿಸಿದಾಗ " ಫ್ಲೋಜಿಸ್ಟನ್ " ಎಂಬ ಬಣ್ಣ, ಗಂಧ ಮತ್ತು ಭಾರವಿಲ್ಲದ "ಪದಾರ್ಥ" ಬಿಡುಗಡೆಯಾಗುತ್ತದೆ ಎಂದೂ, ನಂತರ ಉಳಿದ ವಸ್ತುವನ್ನು (ಬೂದಿ ಇತ್ಯಾದಿ) "ಫ್ಲೋಜಿಸ್ಟನ್ ವಿಯೋಜಿತ" ವಸ್ತುವೆಂದೂ ತಿಳಿಯಲಾಗಿತ್ತು. ಮತ್ತು ಹೀಗೆ ದಹನದಿಂದ ಬಂದ ಉತ್ಪನ್ನಗಳೇ ಮೂಲಧಾತುಗಳೆಂದು ತಿಳಿದಿದ್ದರು. ಫಾಸ್ಪರಸ್, ಕಾರ್ಬನ್ ಮತ್ತು ಸಲ್ಫರ್‌ಗಳನ್ನು ದಹಿಸಿದಾಗ ಫಾಸ್ಪರಸ್, ಕಾರ್ಬನಿಕ್ ಮತ್ತು ಸಲ್ಫ್ಯೂರಸ್ ಆಮ್ಲಗಳು (ಆಕ್ಸೈಡ್‌ಗಳು) ಉತ್ಪತ್ತಿಯಾಗುತ್ತಿದ್ದುದರಿಂದ ಇವುಗಳೇ ಮೂಲಧಾತುಗಳೆಂದು ಭಾವಿಸಿದ್ದರು, (ಫಾಸ್ಪರಸ್, ಕಾರ್ಬನ್, ಸಲ್ಪರ್‌ಗಳು ಧಾತುಗಳಲ್ಲವೆಂದಾಯಿತು!).

ಲವಾಸಿಯೆ ಈ ಉತ್ಪನ್ನಗಳು ಆಮ್ಲದ ಗುಣಗಳನ್ನು ಹೊಂದಿವೆ ಎಂದು ತೋರಿಸಿಕೊಟ್ಟರು ಮತ್ತು ಯಾವುದೇ ಅಲೋಹ ದಹಿಸಿದರೂ ಆಮ್ಲ ಉತ್ಪತ್ತಿಯಾಗುತ್ತದೆಂದು ತೋರಿಸಿಕೊಟ್ಟು, ಈ ಆಮ್ಲಗಳು ಸೃಷ್ಟಿಯಾಗಲು ಅವಶ್ಯಕವಾಗಿ ಬೇಕಾಗುವ ವಸ್ತುವು "ಆಮ್ಲಜನಕ"ವೆಂದೂ ಮತ್ತು ಅದು ಮೂಲಧಾತುವೆಂದು ಸಾಧಿಸಿದರು. ಕೆಲವರ್ಷಗಳ ನಂತರ, ಸರ್ ಹಂಫ್ರಿ ಡೇವಿ, ಲೂಯಿ ಜೋಸೆಫ್ ಗೆ-ಲುಸ್ಸಾಕ್ ಮತ್ತು ಲೂಯಿ–ಜಾಕ್ ಥೆನಾರ್ಡ್ ಈ ತತ್ವವನ್ನು ವಿಸ್ತರಿಸಿ, ಆಮ್ಲಜನಕ ಇಲ್ಲದೆಯೂ ಆಮ್ಲಗಳು ಆಗಲು ಸಾಧ್ಯವೆಂದು ಹೈಡ್ರೋಕ್ಲೋರಿಕ್ ಆಮ್ಲ, ಕ್ಲೋರೀನ್ ಮತ್ತು ಹೈಡ್ರೊಸ್ಯೆಯನಿಕ್ ಆಮ್ಲಗಳ ಮೇಲಿನ ಪ್ರಯೋಗಗಳಿಂದ ತೋರಿಸಿಕೊಟ್ಟರು. ಲವಾಸಿಯೆ ಪ್ರತಿಪಾದಿಸಿದ ಪ್ರಯೋಗ ಮಾಹಿತಿಗಳನ್ನು ವೈಜ್ಞಾನಿಕ ಸಿದ್ಧಾಂತಗಳನ್ನೂ ಜೋಸೆಫ್ ಬ್ಲ್ಯಾಕ್ 1784ರಲ್ಲಿ ತಮ್ಮ ಪಾಠಗಳಲ್ಲಿ ಪಠ್ಯವಸ್ತುವಾಗಿ ಮೊದಲ ಬಾರಿಗೆ ಉಪಯೋಗಿಸಿದರು.

ಮಾಪನವು ವಿಜ್ಞಾನದ ಒಂದು ಪ್ರಮುಖ ಮತ್ತು ಅವಿಭಾಜ್ಯ ಅಂಗವಾಗಿದೆ. ಆದರೆ ಲವಾಸಿಯೆಗಿಂತ ಮೊದಲು ತೂಕ ಇತ್ಯಾದಿಗಳ ನಿಖರವಾದ ಮಾಪನಕ್ಕೆ ಗಮನ ಕೊಡುತ್ತಿರಲಿಲ್ಲ. ಲವಾಸಿಯೆ ಈ ಭಾವನೆಯನ್ನು ಬದಲಿಸಿದರು. ಪ್ರಯೋಗ ಮಾಡುವಲ್ಲಿ ನಿರ್ದಿಷ್ಟ ತೂಕದ ಅವಶ್ಯಕತೆಯನ್ನು ತೋರಿಸಿಕೊಟ್ಟರು. ಸರಿಯಾದ ತಕ್ಕಡಿ ಉಪಯೋಗಿಸಿ ಪ್ರಯೋಗಗಳನ್ನು ಮಾಡಿದವರಲ್ಲಿ ಲವಾಸಿಯೆ ಮೊದಲಿಗರು. ತೂಕದಲ್ಲಿ ದಶಮಾನ ಪದ್ಧತಿಯನ್ನು ಅಳವಡಿಸಿದವರೂ ಅವರೇ. ಇಂತಹ ಪ್ರಯೋಗಗಳಿಂದಲೇ ಧಾತುಗಳು ದಹಿಸಿದಾಗ ಬರುವ ಉತ್ಪನ್ನಗಳ ತೂಕ ಹೆಚ್ಚಾಗಿರುತ್ತದೆಂದೂ ಅದಕ್ಕೆ ಕಾರಣ ಗಾಳಿಯಲ್ಲಿನ ಆಮ್ಲಜನಕ ಆ ಧಾತುಗಳೊಡನೆ ಕ್ರಿಯಿಸುವುದರಿಂದ ಎಂದೂ ಪ್ರತಿಪಾದಿಸಿದರು. ಆಮ್ಲಜನಕವನ್ನು ಇಂಗ್ಲೆಂಡಿನ ಜೋಸೆಫ್ ಪ್ರಿಸ್ಟ್‌ಲೀ ಮತ್ತು ಸ್ವೀಡನ್ನಿನ ಕಾರ್ಲ್ ವಿಲ್‌ಹೆಲ್ಡ್ ಹೀಲೆ ಬೇರೆಬೇರೆಯಾಗಿ ಕಂಡುಹಿಡಿದಿದ್ದರು. ಪ್ರೀಸ್ಟ್‌ಲೀ ಅದನ್ನು " ಫ್ಲೋಜಿಸ್ಟನ್ ವಿಯೋಜಿತ ಗಾಳಿ" ಎಂದು ಕರೆದರು. ಲವಾಸಿಯೆ ಅದನ್ನು ಮೊದಮೊದಲು "ಪರಿಶುದ್ಧವಾದ ಗಾಳಿ" ಎಂದು ಕರೆದರು. ನಂತರ ಅದಕ್ಕೆ "ಆಕ್ಸಿಜನ್" ಎಂದು ಹೆಸರು ಕೊಟ್ಟರು. (Greek: okus = sharp, ginomai= to become). ಇಂತಹ ಪ್ರಯೋಗಗಳಿಂದ ಧಾತುಗಳಾವು, ಆಮ್ಲಗಳಾವು ಎಂಬುದನ್ನೂ ಪ್ಲೋಜಿಸ್ಟನ್ ಎಂಬುದು ತಪ್ಪು ಕಲ್ಪನೆ ಎಂದೂ ಸಾಧಿಸಿದರು. ಆದರೂ ಕೂಡ ಪ್ರೀಸ್ಟ್‌ಲೀ, ಗೆ-ಲುಸ್ಸಾಕ್ ಮೊದಲಾದವರು ಪ್ಲೋಜಿಸ್ಟನ್‌ಬಗೆಗಿದ್ದ ತಮ್ಮ ನಿಷ್ಠೆಯನ್ನು ಬದಲಿಸಲಿಲ್ಲ.

ಪಂಚಭೂತವಾದಿಗಳು ನೀರನ್ನು ಆಸವಕ್ಕೊಳಪಡಿಸಿದಾಗ ಮಣ್ಣಾಗಿ ರೂಪಾಂತರ ಹೊಂದುತ್ತದೆಂದು ತಿಳಿದಿದ್ದರು.

ಇದನ್ನು ಒಂದು ಸರಳ ಪ್ರಯೋಗದಿಂದ ಲವಾಸಿಯೆ ಸುಳ್ಳೆಂದು ತೋರಿಸಿಕೊಟ್ಟರು. ನೀರು ತುಂಬಿದ ಒಂದು ಗಾಜಿನ ಫ್ಲಾಸ್ಕಿನ ಬಾಯಿ ಬೆಸೆದು. ನೀರನ್ನು ಬಹಳ ಕಾಲ ಮರಳಿಸಿದರು. ಅದು ಮಣ್ಣಾಗಲೂ ಇಲ್ಲ, ಮತ್ತು ಅದರ ತೂಕದಲ್ಲಿಯೂ ವ್ಯತ್ಯಾಸವಾಗಲಿಲ್ಲ. ಅನಿಲಗಳ ದಹನಕ್ರಿಯೆಗಳನ್ನು ಆಧ್ಯಯನ ಮಾಡಿದರು. ಅವು ದಹನದಲ್ಲಿ ಗಾಳಿಯಲ್ಲಿನ ಆಮ್ಲಜನಕವನ್ನು ತೆಗೆದುಕೊಳ್ಳುತ್ತವೆ ಎಂದೂ, ಒಟ್ಟು ತೂಕದಲ್ಲಿ ವ್ಯತ್ಯಾಸವಾಗದೇ ಅವು ಸ್ಥಿರವಾಗಿ ಇರುತ್ತದೆಂದೂ ತೋರಿಸಿಕೊಟ್ಟರು.

1774ರಲ್ಲಿ ಲವಾಸಿಯೆ ತಮ್ಮ ಒಂದು ಪ್ರಮುಖ ಪುಸ್ತಕ "ಭೌತ ಮತ್ತು ರಸಾಯನಶಾಸ್ತ್ರಗಳ ಗ್ರಂಥ"ವನ್ನು ಪ್ರಕಟಿಸಿದರು. ಇದಕ್ಕೆ ಅವರ ಹೆಂಡತಿ ಮೇರಿ–ಆನ್ನ್ ಸುಂದರವಾಗಿ ಚಿತ್ರಗಳನ್ನು ಬಿಡಿಸಿದ್ದಾರೆ. ಇದಲ್ಲದೆ ಅವರು ಇನ್ನೂ ಅನೇಕ ಪ್ರಕಟಣೆಗಳನ್ನು ಹೊರ ತಂದರು. ಅವುಗಳಲ್ಲಿ ರಸಾಯನನಶಾಸ್ತ್ರ, ಹವಾಮಾನಶಾಸ್ತ್ರ, ಭೂವಿಜ್ಞಾನ ಕುರಿತ ಬರಹಗಳು ಮತ್ತು ಪ್ರಯೋಗ ಪಠ್ಯಪುಸ್ತಕಗಳೂ ಸೇರಿವೆ. ಇವುಗಳಿಗೂ ಮೇರಿ–ಆನ್ನ್ ಚಿತ್ರಗಳನ್ನು ಬಿಡಿಸಿದ್ದಾರೆ.

**ಫ್ಲೋಜಿಸ್ಟನ್ ಬಗ್ಗೆ ಇನ್ನಷ್ಟು ವಿವರ**

17ನೇ ಶತಮಾನದಲ್ಲಿ ರಾಬರ್ಟ್ ಬಾಯ್ಲ್ ಸತುವಿನ ಭಸ್ಮದ ಮೇಲೆ ಮಾಡಿದ ಪ್ರಯೋಗಗಳನ್ನು ಲವಾಸಿಯೆ 1774ನಲ್ಲಿ ಪಾ ಮಾಡಿದರು. ಬಾಯ್ಲ್ ಪ್ರಕಾರ ಸತುಲೋಹವನ್ನು ದಹಿಸಿದಾಗ ಬಂದ ಭಸ್ಮದ ತೂಕ ಸತುವಿನ ತೂಕಕ್ಕಿಂತ ಹೆಚ್ಚಾಗಿತ್ತು ಫ್ಲೋಜಿಸ್ಟನ್ ವಾದದ ಪ್ರಕಾರ ದಹನಕ್ರಿಯೆಯಲ್ಲಿ ಫ್ಲೋಜಿಸ್ಟನ್ ಬಿಡುಗಡೆಯಾಗುತ್ತವೆಯಾದ್ದರಿಂದ ಅದಕ್ಕೆ ಋಣಾತ್ಮಕ ತೂಕವಿದೆಯೆಂದು ಫ್ಲೋಜಿಸ್ಟನ್ ವಾದಿಗಳು ಸಮರ್ಥಿಸಿಕೊಂಡರು. ಕ್ಯಾವೆಂಡಿಷ್ ಫ್ಲೋಜಿಸ್ಟನ್ ಒಂದು ಜ್ವಲನಶೀಲ ಗಾಳಿ ಎಂದು ತಿಳಿದಿದ್ದರು ಮತ್ತು ಪ್ರೀಸ್ಟ್ಲಿ ಅದನ್ನು ಒಂದು ಪದಾರ್ಥವೆಂದು ಪರಿಗಣಿಸಿದ್ದರು. ಅಂತೂ ಫ್ಲೋಜಿಸ್ಟನ್ ಎಂಬುದನ್ನು ವಿಜ್ಞಾನಿಗಳು ಯಾವ ತಾತ್ವಿಕ ವಿವರಣೆಗೆ ಬೇಕಾರರೂ ಉಪಯೋಗಿಸಿಕೊಳ್ಳುತ್ತಿದ್ದರು. ಹೀಗಾಗಿ ಆ ವಾದದಲ್ಲಿನ ಕುಂದುಕೊರತೆಗಳ ಕಡೆ ಅವರುಗಳು ಗಮನಕೊಡಲಿಲ್ಲ. ಲವಾಸಿಯ ಮಾತ್ರ ಅವರಲ್ಲಿ ಒಂದಿಷ್ಟೂ ನಂಬಿಕೆ ಇಟ್ಟಿರಲಿಲ್ಲ.

ಲವಾಸಿಯೆ ಸತುವನ್ನು ಒಂದು ಮುಚ್ಚಿದ ಫ್ಲಾಸ್ಕಿನಲ್ಲಿ ಕಾಯಿಸಿ ಭಸ್ಮವಾದ ಮೇಲೆ ಫ್ಲಾಸ್ಕನ್ನು ತೆರೆದಕೂಡಲೇ ಗಾಳಿ ಒಳನುಗ್ಗುತ್ತಿತ್ತು – ಸಂದರ್ಭದಲ್ಲಿ ಪ್ರೀಸ್ಟ್ಲಿ ಪ್ಯಾರಿಸಿಗೆ ಬಂದು ಲವಾಸಿಯೆರನ್ನು ಭೇಟಿಯಾಗಿ ತಮ್ಮ ಫ್ಲೋಜಿಸ್ಟನ್ ವಿಯೋಜಿತ ಗಾಳಿಯ ಬಗ್ಗೆ ಹೇಳಿದರು. ಅದೇ ವೇಳೆಗೆ ಷೀಲೆಯವರು ಲವಾಸಿಯೆರಿಗೆ ತಾವು ಆಮ್ಲಜನಕ ತಯಾರಿಸುವ ಪ್ರಯೋಗ ಕುರಿತು ಪತ್ರ ಬರೆದು, ಆ ಪ್ರಯೋಗವನ್ನು ಅವರು ಮಾಡಿನೋಡಬೇಕೆಂದು ತಿಳಿಸಿದ್ದರು (30.09.1774). ಷೀಲೆ ಮತ್ತು ಪ್ರೀಸ್ಟ್ಲಿಯವರುಗಳ ಆಮ್ಲಜನಕ ತಯಾರಿಕೆಗಳಿಂದ ಅವಾಸಿಯೆ ಫ್ಲೋಜಿಸ್ಟನ್ ಬಗೆಗಿನ ನಂಬಿಕೆಯನ್ನು ಸಂಪೂರ್ಣವಾಗಿ ಬಿಟ್ಟರು, 1777ರಲ್ಲಿ 12 ದಿನಗಳ ಕಾಲ ಪಾದರಸದ ಮೇಲೆ ಒಂದು ಪ್ರಯೋಗ ಮಾಡಿ ಫ್ಲೋಜಿಸ್ಟನ್ ವಾದದಲ್ಲಿರುವ ಕುಂದುಗಳನ್ನು ತೋರಿಸಿಕೊಟ್ಟರು.
ಒಂದು ಘಂಟಾಪಾತ್ರೆಯಲ್ಲಿ ಪಾದರಸವನ್ನಿಟ್ಟು 12 ದಿನಗಳ ಕಾಲ ಕಾಯಿಸಿದರು. ಅದು ಕೆಂಪು ಬಣ್ಣದ ಭಸ್ಮವಾಯಿತು. (ಈಗ ನಮಗೆ ಇದು ಊರಂಔ ಎಂದು ತಿಳಿದಿದೆ), ಹಾಗೆಯೇ ಘಂಟಾಪಾತ್ರೆಯಲ್ಲಿದ್ದ ಗಾಳಿಯ ಗಾತ್ರವು 50 ರಿಂದ 42 ಘನ ಇಂಚಿಗೆ ಇಳಿದಿತ್ತು. ಉಳಿದ ಗಾಳಿಯು ವಾತಾವರಣದಲ್ಲಿರುವ ಕೆಟ್ಟಗಾಳಿ ಎಂದು ತೀರ್ಮಾನಿಸಿದರು. ಅದಕ್ಕೆ ಮುಂದೆ ಅಜೋಟ್ ಎಂದು ಹೆಸರಿಡಲಾಯಿತು. (ಈಗ ಅದು ನೈಟ್ರೋಜನ್ ಆಗಿದೆ), ನಂತರ ಪಾದರಸದ ಕೆಂಪು ಭಸ್ಮವನ್ನು ಒಂದು ಬಕ ಪಾತ್ರೆಯಲ್ಲಿಟ್ಟು ಹೆಚ್ಚಿನ ಶಾಖಕ್ಕೆ ಕಾಯಿಸಿದಾಗ 8 ಘನ ಇಂಚುಗಾತ್ರದ ಫ್ಲೋಜಿಸ್ಟನ್ ವಿಯೋಜಿತ ಗಾಳಿ (ಅಮ್ಲಜನಕ) ಬಿಡುಗಡೆಯಾಯಿತು. ಈ ಸರಳ ಪ್ರಯೋಗಗಳಿಂದ ತಿಳಿದುಬಂದದ್ದು

$$2Hg + O2 \rightarrow 2HgO$$

ಭಸ್ಮವನ್ನು ಇನ್ನೂ ಹೆಚ್ಚಿನ ಶಾಖದಲ್ಲಿ ಕಾಯಿಸಿದರೆ ಹಿಮ್ಮುಖ ಕ್ರಿಯೆ ನಡೆದು ಮೊದಲಿನ ವಸ್ತುಗಳು ಅದೇ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತವೆ.

$$2HgO \rightarrow 2Hg + O2$$

ಇಲ್ಲಿ ಬರೆದಿರುವ ಸಮೀಕರಣಗಳು ಆಧುನಿಕವಾದವುಗಳು, ಲವಾಸಿಯ ಹಾಗೆ ಬರೆಯುತ್ತಿರಲಿಲ್ಲ) ಫ್ಲೋಜಿಸ್ಟನ್ ವಾದದ ಪ್ರಕಾರ ರಾಸಾಯನಿಕ ಕ್ರಿಯೆಗಳನ್ನು ಹಿಮ್ಮುಖಗೊಳಿಸಲಸಾಧ್ಯ ಹೀಗೆ ಲವಾಸಿಥಿಯೆ ರಸಾಯನಶಾಸ್ತ್ರದಿಂದ "ಫ್ಲೋಜಿಸ್ಟನ್ ಪದಾರ್ಥ"ವನ್ನು ಬಿಡುಗಡೆ ಮಾಡಿ ಮತ್ತೆ ಹಿಂದಿರುಗದಂತೆ ಓಡಿಸಿದರು. ಆದರೂ ಅದನ್ನು ನಂಬಿದವರು ಅರನ್ನು ಅಷ್ಟು ಸುಲಭವಾಗಿ ಬಿಡಲಿಲ್ಲ.

ಲವಾಸಿಯರರ ಅಮ್ಲಜನಕ ತತ್ವಕ್ಕೆ ಪ್ರೀಸ್ಟ್ಲಿ, ಕ್ಯಾವೆಂಡಿಷ್ ಮತ್ತು ತಾವೇ ಮಾಡಿದ ಬೇರೆ ಬೇರೆ ಪ್ರಯೋಗಗಳಿಂದ ಪುರಾವೆ ಸಿಕ್ಕಿತು. ಅಲ್ಲದೇ ಅವರು ನೀರನ್ನು ವಿಭಜಿಸಿ, ಅದರಿಂದ ಎರಡು ಆನಿಲಗಳು ಉತ್ಪನ್ನವಾಗುತ್ತವೆ ಎಂದು ತೋರಿಸಿಕೊಟ್ಟರು, ಮತ್ತು ಅವುಗಳಿಗೆ ಆಮ್ಲಜನಕ ಮತ್ತು ಜಲಜನಕ ಎಂದು ಹೆಸರು ಕೊಟ್ಟರು.

**ಇತರ ಕಾರ್ಯಗಳು**

ಲವಾಸಿಯೆ 1789ರಲ್ಲಿ "Elementary Treatise of Chemistry" ಎಂಬ ಗ್ರಂಥವನ್ನು ಪ್ರಕಟಿಸಿದರು. ಇದರ ಮೂಲಕ ತಮ್ಮ ವಿಚಾರಗಳನ್ನೂ, ಆಮ್ಲಜನಕ ಸಿದ್ಧಾಂತವನ್ನೂ ಪ್ರಸಾರ ಮಾಡಿದರು. ಅದರಲ್ಲಿ 33 ಮೂಲ ಧಾತುಗಳನ್ನು ನಮೂದಿಸಿದರು. ಈ ಪುಸ್ತಕವು ಆ ಕಾಲಮಾನಕ್ಕೆ ಬಹಳ ಮುಂದುವರೆದ ಗ್ರಂಥವಾಗಿತ್ತು, ಮತ್ತು ಅದು ಒಂದು ಆಧುನಿಕ ಪಠ್ಯಪುಸ್ತಕದ ಹಳೆಯ ಸಂಪುಟವೇನೋ ಎಂದು ಭಾಸವಾಗುವಂತಿದೆ. ಆದ್ದರಿಂದ ರಸಾಯನಶಾಸ್ತ್ರದ ವಿದ್ಯಾರ್ಥಿಗಳು ಅದನ್ನು ಈಗಲೂ ಉಪಯೋಗಿಸಬಹುದು.

ಜ್ಞಾನಾರ್ಜನೆ, ತಾರ್ಕಿಕ ವಿಚಾರಗಳನ್ನು ಸತತವಾಗಿ ಮಾಡುತ್ತಿದ್ದ ಲವಾಸಿಯೆ ನೂರಾರು ಪ್ರಯೋಗಗಳನ್ನು ಮಾಡಿದರು. ಅನಿಲಗಳ ವಿಶ್ಲೇಷಣೆ, ಗಾಳಿಯ ಗುಣಗಳು, ಮಾನವರ ಮತ್ತು ಪ್ರಾಣಿಗಳ ಉಸಿರಾಟ, ಕಾರ್ಬನಿಕ ಸಂಯುಕ್ತಗಳು ದೇಪದಲ್ಲಿ ಪರಿವರ್ತನೆ ಹೊಂದುವ ರೀತಿ, ಹೀಗೆ ವಿವಿಧ ರೀತಿಯ ವಿಷಯಗಳನ್ನೂ ಲವಾಸಿಯೆ ಅಧ್ಯಯನ ಮಾಡಿದರು. ಮೆಟ್ರಿಕ್ ಪದ್ಧತಿಯನ್ನು ವಿಜ್ಞಾನಕ್ಕೆ ಅಳವಡಿಸಿಕೊಂಡು ನಿಖರವಾದ ತೂಕದಿಂದಾಗುವ ಪ್ರಯೋಗ ಫಲಿತಾಂಶಗಳಲ್ಲಿನ ಉಪಯೋಗಗಳನ್ನು ತೋರಿಸಿಕೊಟ್ಟರು. ವಿಜ್ಞಾನದ ಹಾದಿಯನ್ನು ಸರಿಪಡಿಸಿದ ಮಹಾನುಭಾವ ಅವರು.

******

## ಸೌರ ವ್ಯೂಹದ ಶಿಷ್ಟ ಚರಣದ .....

**ಡಾ. ಜಿ.ಎನ್. ದಯಾನಂದ**

ಉನ್ನತ ವಿಜ್ಞಾನಿ (ನಿವೃತ್ತ), ಕೌನ್ಸಿಲ್ ಆಫ್ ಸೈಂಟಿಫಿಕ್ & ಇಂಡಸ್ಟ್ರಿಯಲ್ ರಿಸರ್ಚ್

ಸೌರ ವ್ಯೂಹದ ಶಿಷ್ಟ ಚರಣದ ಸೂತ್ರ ದಾರಿ ಸೂರ್ಯನು; ಅಷ್ಟ ಗ್ರಹಗಳು ಅವನ ಅನುಚರರು.
ಆಕಾಶಕಾಯಗಳಲಿ ಹೊಸ ವಸಾಹತುಗಳಿಗೆ ಆಶಿಸು ವಿಜ್ಞಾನದ ಅನುವನು.
ಸೌರ ವ್ಯೂಹದ ಒಳ ಅಂಗಳದಲಿ ರವಿಯ ಕಿರಣ ನಿಕಟ ಬುಧನ ಮನೆಯ ಮೊದಲು ಮುಟ್ಟಿ.
ಶುಕ್ರನ ನೃತ್ಯಾಕಾರವ ಒಮ್ಮೆ ನೋಡಿ , ಭೂಮಿಗೆ ಬೆಳಕಿನ ಹೊನಲು ಚೆಲ್ಲಿ,
ಮಂಗಳನಿಗೂ ಮಂಗಳ ಬಯಸಿ, ಒಡ ಹುಟ್ಟಿದ ಒಳ ಗ್ರಹಗಳಲಿ ತುಂಬಿ ಹರಿಯಲಿ.
ತದನಂತರ ಸೌರ ವ್ಯೂಹದ ಆಚೆ ವಲಯದ ಅನಿಲ ಗ್ರಹಗಳ ಬೃಹತ್ತಾಕಾರದ ಬಲವಾದ ಗುರು,
ಹಲವು ಉಪಗ್ರಹಗಳವುಳ್ಳ ಶನಿ, ನೆಪ್ಟ್ಯೂನ್ ಮತ್ತು ಯುರೇನಸ್ ಗಳಲ್ಲಿಯೂ ರವಿಯ ಕಿರಣ ತುಂಬಿ ಹರಿಯಲಿ.
ಸೌರ ವ್ಯೂಹದ ಶಿಷ್ಟ ಚರಣದ ಸೂತ್ರ ದಾರಿ ಸೂರ್ಯನು; ಅಷ್ಟ ಗ್ರಹಗಳು ಅವನ ಅನುಚರರು.

(ಈ ಕವಿತೆ ಸೂರ್ಯ ಮತ್ತು ಸೌರವ್ಯೂಹದ 8 ಗ್ರಹಗಳ ನಡುವಿನ ಸಂಬಂಧವನ್ನು ತೆರೆದಿಡುತ್ತದೆ. ಈ ಕವಿತೆಯನ್ನು ಆಧರಿಸಿದ ಯೂಟ್ಯೂಬ್ ಹಾಡು ಇಲ್ಲಿ ಲಭ್ಯವಿದೆ: https://youtu.be/3mgMCpfV578)

# Discovering Exoplanets



. Basavaraj A. Kagali
Professor of Physics (retd.)
Bangalore University

Planets outside our solar system are called exoplanets. Since the discovery of the first exoplanet about thirty years ago, more than five thousand planets have been found orbiting different stars beyond our Solar System. Many of these newly found planets are very different, in several ways, from those known to us in the Solar System. Details about their size, mass, composition, orbital periods, etc., are becoming available now. The field of exoplanetary research is growing rapidly with the launch of space-based telescopes like NASA's James Webb Telescope.

**Planets beyond our solar system – early hints and discoveries**

The first exoplanets discovered were two planets orbiting a pulsar – a dead star that emits short pulses of electromagnetic radiation. This discovery was made in 1992 by Aleksander Wolszczan and Dale Frail using a giant radio telescope. They detected subtle changes in the timing of the pulsar's regular pulsed emissions.

Three years later, in 1995, Michel Mayor and Didier Queloz from the Geneva Observatory in Switzerland announced that they had detected a planet orbiting a Sun-like star named 51 Pegasi. This generated a lot of excitement in the study of exoplanets.

Earlier observations suggested the presence of an exoplanet around a main sequence star – but it was not realized at the time! In 1988, Bruce Campbell, Gordon Walker, and Stephenson Yang found that the star Gamma Cephei was wobbling oddly. Although the scientists first thought that it might be a planet, they concluded at that time that stellar activity would be a more likely explanation!

**Exoplanet detection methods**

**A. Wobbling of stars**

The first planets found orbiting Sun-like stars were detected by the radial velocity technique. A single star without a planetary system will have its centre of gravity located at the centre of the star. However, when a planet is orbiting a star, the centre of gravity of the star-planet system becomes offset from the centre of the star, causing the star to "wobble" back and forth – meaning the star's position changes periodically around a point. When that happens the radial or line-of-sight velocity of the star will be found changing periodically. This leads to the shifting of the star's spectral lines by very small amounts – the optical analogue of the familiar Doppler effect for sound. By measuring such shifting of spectral lines, we can conclude the presence of otherwise invisible planets around the star.




Shifting of stellar spectral lines due to a planet

51 Pegasi b – the exoplanet discovered by Mayor and Queloz – is a Jupiter-mass planet that orbits very close to its star, resulting in relatively large changes in the radial velocity signal. This type of

planet, a gas giant orbiting very close to its parent star, is now termed a hot Jupiter. Its discovery was a complete surprise, as theories of planet formation had suggested that such a planet could not form so close to a star. Mayor and Queloz were awarded the Nobel Prize in Physics in 2019.

**B. Astrometry**

Astrometry is the method that detects the motion of a star by making very precise measurements of its position in the sky. This technique can also be used to identify planets around a star by measuring tiny changes in the star's position as it wobbles around the center of mass of the planetary system. However, the precision required to detect a planet orbiting a star using this technique is extremely difficult to achieve. Hence, very few planets have been discovered by this method.




Planet detection through stellar astrometry

Nonetheless, astrometry has been used to make follow-up observations for planets detected using other methods. Using the astrometric technique, the Gaia mission of ESA is expected to detect thousands of exoplanets up to a distance of 1,600 light-years from the Sun.

**C. The transit method**

